ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಬೆಂಗೇರಿ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಪ್ರಕಾಶ ಗಿರಿಮಲ್ಲನವರ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**BENGERI:** An Introduction Book on Places in Karnataka that Played a Major Role in the Freedom Struggle, Written by Prakash Girimallanavara, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಪ್ರಕಾಶ ಗಿರಿಮಲ್ಲನವರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೪೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಕರ್ನಾಟಕ ಸರ್ಕಾರ

## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಈ ವರ್ಷ ಭಾರತಕ್ಕೆ ಸ್ವಾತಂತ್ರ್ಯ ದೊರೆತು ೭೫ ವಸಂತಗಳು ಪೂರ್ಣಗೊಳ್ಳುತ್ತಿವೆ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಸಮಾಜ ಮತ್ತು ವ್ಯಕ್ತಿಗಳು ನಡೆಸಿದ ಚಳುವಳಿ, ವಹಿಸಿದ ಪಾತ್ರಗಳ ಅನ್ವೇಷಣೆ–ಅಧ್ಯಯನ ದೃಷ್ಟಿಯಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸವಿನೆನಪಿನ ಮಾಲೆಯಲ್ಲಿ ೭೫ ಕಿರು ಕೃತಿಗಳನ್ನು ಪ್ರಕಟಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾದುದು.

ಸ್ವಾತಂತ್ರ್ಯ ಹೋರಾಟದ ರೂಪ–ಸ್ವರೂಪ, ಧ್ಯೇಯ ಧೋರಣೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದವು. ಮುಂಬೈ ಮತ್ತು ಮದ್ರಾಸ್ ಪ್ರದೇಶಗಳಲ್ಲಿ ಈ ಹೋರಾಟ ಆಂಗ್ಲರ ವಿರುದ್ಧವಿದ್ದರೆ, ಮೈಸೂರು ಭಾಗದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆ ಮತ್ತು ಪರೋಕ್ಷವಾಗಿ ಭಾರತ ಸ್ವಾತಂತ್ರ್ಯಕ್ಕಾಗಿದ್ದಿತು. ಕಲಬುರ್ಗಿ–ಬೀದರ ಪ್ರದೇಶಗಳಲ್ಲಿ ಹೈದರಾಬಾದ್ ನಿಜಾಮರ ಸಂಸ್ಥಾನದ ರಜಾಕಾರರ ದಬ್ಬಾಳಿಕೆಯ ವಿರುದ್ಧ ನಡೆದ ಹೋರಾಟವಾಗಿತ್ತು.ರಾಮದುರ್ಗ–ಜಮಖಂಡಿ ಮೊದಲಾದ ಸಂಸ್ಥಾನ ರಾಜ್ಯಗಳಲ್ಲಿ ಸರ್ಕಾರದ ಸ್ಥಾಪನೆ ಮತ್ತು ಭಾರತದ ಒಕ್ಕೂಟದಲ್ಲಿ ಈ ಸಂಸ್ಥಾನಗಳ ವಿಲೀನೀಕರಣದ ಉದ್ದೇಶ ಹೊಂದಿದ್ದಿತು. ಈ ಎಲ್ಲ ಬಗೆಯ ಜನಪರ ಹೋರಾಟಗಳಲ್ಲಿ ಸಮಸ್ತ ಕನ್ನಡಿಗರು ಸಕ್ರಿಯವಾಗಿ ಪಾಲುಗೊಂಡರು. ಸ್ವತಂತ್ರ ಸಂಯುಕ್ತ ಪ್ರಜಾಪ್ರಭುತ್ವ ಮತ್ತು ಧರ್ಮನಿರಪೇಕ್ಷ ಗಣರಾಜ್ಯ ಸ್ಥಾಪನೆ ಮೊದಲಾದ ಗುರಿಗಳ ಸಾಫಲ್ಯತೆಗಾಗಿ ಕನ್ನಡಿಗರು ಕ್ರಿಯಾತ್ಮಕವಾಗಿ ಭಾಗವಹಿಸಿದರು.

ಈ ಹಿನ್ನೆಲೆಯಲ್ಲಿ ಧಾರವಾಡ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು "ಬೆಂಗೇರಿ" ಸುತ್ತಮುತ್ತಲಿನ ಸ್ವಾತಂತ್ರ್ಯ ಹೋರಾಟ ದೃಷ್ಟಿಯಲ್ಲಿಟ್ಟುಕೊಂಡು ಈ ಕಿರು ಕೃತಿಯನ್ನು ರಚಿಸಿರುವೆ. ಸ್ವಾತಂತ್ರ್ಯ ಹೋರಾಟ ಕುರಿತು ಈವರೆಗೆ ಬಂದ ಎಲ್ಲ ಕೃತಿಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಈ ಕೃತಿ ರಚನೆಗೆ ಆಕರವಾಗಿ ಬಳಸಿಕೊಂಡಿದ್ದೇನೆ. ಆ ಎಲ್ಲ ಲೇಖಕ ಮಹನೀಯರಿಗೆ ವಂದನೆಗಳು.

ಇಂಥ ಒಂದು ಮಹತ್ವದ ಯೋಜನೆಯನ್ನು ರೂಪಿಸಿ, ಕ್ಲುಪ್ತ ಅವಧಿಯಲ್ಲಿ ಕೃತಿಗಳನ್ನು ಪ್ರಕಟಿಸುತ್ತಿರುವ ನಮ್ಮ ದಿನಮಾನದ ಕ್ರಿಯಾಶೀಲ ವಿದ್ವಾಂಸರೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರೂ ಆದ ಡಾ. ಬಿ. ವಿ. ವಸಂತಕುಮಾರ ಅವರಿಗೆ ಅನಂತ ವಂದನೆಗಳು. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಕರಿಯಪ್ಪ ಅವರಿಗೂ ಉಳಿದ ಎಲ್ಲ ಸದಸ್ಯರಿಗೆ ವಂದನೆಗಳು.

ಈ ಯೋಜನೆಯ ಸಂಪಾದಕರಲ್ಲಿ ಒಬ್ಬರಾದ ಡಾ. ಮೃತ್ಯುಂಜಯ ರುಮಾಲೆ ಅವರು ನನ್ನ ಬೆನ್ನ ಹಿಂದಿನ ಶಕ್ತಿಯಾಗಿ, ಕಣ್ಣ ಮುಂದಿನ ಬೆಳಕಾಗಿ ಮಾರ್ಗದರ್ಶನ ಮಾಡಿದ್ದಾರೆ. ಅವರ ಪ್ರೇರಣೆ–ಪ್ರೋತ್ಸಾಹ ಇಲ್ಲದಿದ್ದರೆ ಇಷ್ಟು ಬೇಗ ಈ ಕೃತಿಗಳನ್ನು ರಚಿಸಲು ಸಾಧ್ಯವಿರಲಿಲ್ಲ. ಅವರಿಗೆ ಅನಂತ ವಂದನೆಗಳು.

ಆಕರ ಸಾಮಗ್ರಿ ಒದಗಿಸಿಕೊಟ್ಟ ಡಾ. ಎಸ್.ಆರ್. ಗುಂಜಾಳ, ಡಾ. ಬಿ. ನಂಜುಂಡಸ್ವಾಮಿ, ಡಾ. ಸರಜೂ ಕಾಟ್ಕರ್, ಶ್ರೀ ರಾಯನಗೌಡ ಪಾಟೀಲ, ಡಾ. ಎಂ.ಎಸ್. ಹುಲ್ಲೋಳಿ ಮೊದಲಾದ ಹಿರಿಯರಿಗೆ ವಂದನೆಗಳು.

**– ಪ್ರಕಾಶ ಗಿರಿಮಲ್ಲನವರ**

# ಪರಿವಿಡಿ


| | |
|---|---|
| ಶುಭ ಸಂದೇಶ | ३ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಸ್ವಾತಂತ್ರ್ಯ ಹೋರಾಟ: ಬೆಂಗೇರಿ | ೧೫ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೪೩ |

# ಸ್ವಾತಂತ್ರ್ಯ ಹೋರಾಟ: ಬೆಂಗೇರಿ

ಅದು ಸ್ವಾತಂತ್ರ್ಯ ಚಳವಳಿಯ ಭರ್ತಿ ಕಾಲ. ಭಾರತೀಯರಲ್ಲಿ ದೇಶಭಕ್ತಿ ಜಾಗರ ಮಾಡುವ ಚಟುವಟಿಕೆಗಳು ಜೋರಾಗಿ ನಡೆದಿದ್ದವು. ೧೮೮೫ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ರಾಷ್ಟ್ರೀಯ ಕಾಂಗ್ರೆಸ್ ಆಗಾಗ ಸಭೆ, ಅಧಿವೇಶನಗಳನ್ನು ಹಮ್ಮಿಕೊಂಡು ಇಂಗ್ಲಿಷ್‌ರಿಂದ ಭಾರತವನ್ನು ಬಿಡುಗಡೆ ಮಾಡುವುದಕ್ಕಾಗಿ ಕೈಕೊಳ್ಳಬೇಕಾದ ಕ್ರಮಗಳ ಬಗೆಗೆ ಚರ್ಚೆ ಮಾಡುತ್ತಿತ್ತು. ಇದರಿಂದ ಜನರಲ್ಲಿ ಮಾತೃಭೂಮಿಯ ಬಗ್ಗೆ ಭಕ್ತಿ, ಅಭಿಮಾನ ಮೂಡುತ್ತಿರುವುದನ್ನು ಗಮನಿಸಿದ ಲಾರ್ಡ್ ಕರ್ಜನ್‌ನು ಬಂಗಾಲ ವಿಭಜನೆಯ ಪ್ರಸ್ತಾಪವನ್ನು ಇಂಗ್ಲೆಂಡ್ ಸರಕಾರಕ್ಕೆ ಕಳುಹಿಸಿಕೊಟ್ಟನು. ೧೯೦೫ನೆಯ ಅಕ್ಟೋಬರ್ ೧೬ರಂದು ಸರಕಾರ ಅದನ್ನು ಅನುಮೋದಿಸಿತು. ಇದರಿಂದ ಭಾರತೀಯರಲ್ಲಿ ಬ್ರಿಟಿಷ್ ಸರಕಾರದ ಬಗ್ಗೆ ಅಸಂತೋಷದ ಅಲೆ ದೊಡ್ಡ ಪ್ರಮಾಣದಲ್ಲಿ ಎದ್ದಿತು. ದೇಶಭಕ್ತರಲ್ಲಿ ಎರಡು ಬಣಗಳಾದವು. ಒಂದು ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಎಂಬ ಉಗ್ರವಾದಿಗಳ ಬಣ, ಅದಕ್ಕೆ ಬಾಲಗಂಗಾಧರ ತಿಲಕರು ನಾಯಕರು. ಮತ್ತೊಂದು ಐಕ್ಯಭಾವದಿಂದ ವಿಧಾಯಕವಾಗಿ ಹೋರಾಡಿ ಸ್ವಾತಂತ್ರ್ಯ ಸಾಧಿಸಬೇಕೆಂಬ ಸೌಮ್ಯವಾದಿ ಬಣ ಇದಕ್ಕೆ ದಾದಾಭಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ನಾಯಕರು.

ಎರಡೂ ಬಣಗಳು ಸ್ವಾತಂತ್ರ್ಯದ ಸಲುವಾಗಿ ವಿಭಿನ್ನ ರೀತಿಯಲ್ಲಿ ಆಂದೋಲನವನ್ನು ಸಂಘಟಿಸುತ್ತಿರುವ ಕಾಲದಲ್ಲಿಯೇ ಆ ಕಣಕ್ಕೆ ಮಹಾತ್ಮಾ ಗಾಂಧೀಜಿಯವರ ಪ್ರವೇಶವಾಯಿತು. ಬ್ರಿಟಿಷರು ರೂಪಿಸಿದ್ದ ಕರಾಳ ಶಾಸನ 'ರೌಲೆಕ್ಟ್ ಆ್ಯಕ್ಟ್'ನ್ನು ಪ್ರತಿಭಟಿಸಿ ಮಹಾತ್ಮಾ ಗಾಂಧೀಯವರು ಜನರಿಗೆ ಸತ್ಯಾಗ್ರಹ ಮಾರ್ಗವನ್ನು ಬೋಧಿಸಿದರು. '೧೯೧೯ನೆಯ ಏಪ್ರಿಲ್ ೬ ರಂದು ದೇಶದ

ಜನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಬೇಕು. ಅಂದು ಆಹಾರ ಸೇವಿಸದೆ, ಯಾವ ಉದ್ಯೋಗವನ್ನು ಮಾಡದೆ, ದೇವರನ್ನು ಸ್ತುತಿಸಬೇಕು ಮತ್ತು 'ರೌಲೆಕ್ಟ್ ಆ್ಯಕ್ಟ್'ನ್ನು ತೆಗೆದು ಹಾಕಲು ಸರಕಾರಕ್ಕೆ ಪ್ರಾರ್ಥಿಸಬೇಕು' ಎಂದು ಗಾಂಧೀಜಿ ಕರೆ ಕೊಟ್ಟರು. ಅದೇನು ಮಾಯೆಯೋ ಗಾಂಧೀಜಿಯವರ ಮಾತು ದೇಶದ ಲಕ್ಷಾಂತರ ಜನರನ್ನು ಸೆಳೆಯಿತು. ಅವರ ಸತ್ಯಾಗ್ರಹದ ಅಸ್ತ್ರಕ್ಕೆ ದೊಡ್ಡ ಬಲ ಬಂದಿತು. ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಆಂದೋಲನಕ್ಕೆ ಹೊಸ ತಿರುವು ಸಿಕ್ಕಿತು.

ಸ್ವಾತಂತ್ರ್ಯದ ಬಗೆಗಿನ ಮಹಾತ್ಮಾಜಿಯವರ ಚಿಂತನೆಗಳು ದೇಶದ ಜನರ ಮೇಲೆ ಗಾಢ ಪ್ರಭಾವ ಬೀರತೊಡಗಿದವು. ಭಾರತ, ದಕ್ಷಿಣ ಆಫ್ರಿಕೆಯಂತಹ ವಸಾಹತುಶಾಹಿ ಆಡಳಿತಕ್ಕೆ ಒಳಪಟ್ಟ ದೇಶಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಬ್ರಿಟಿಷರ ಆಡಳಿತವೇ ಕಾರಣವಲ್ಲ. ಅಲ್ಲಿಯ ಜನರು ಪಾಶ್ಚಾತ್ಯರ ಅನುಕರಣೆಯಲ್ಲಿ ತೊಡಗಿರುವುದೇ ಮುಖ್ಯ ಕಾರಣವೆಂಬುದು ಅವರ ಅಭಿಪ್ರಾಯವಾಗಿತ್ತು. ಅವರ ಪ್ರಕಾರ: ಇಂಗ್ಲಿಷ್‌ರು ಭಾರತವನ್ನು ವಶಪಡಿಸಿಕೊಳ್ಳಲಿಲ್ಲ. ನಾವೇ ಅವರಿಗೆ ಒಪ್ಪಿಸಿದೆವು. ಇಂಗ್ಲಿಷ್‌ರಿಗೆ ವ್ಯಾಪಾರ, ಲಾಭಗಳಿಕೆ ಮುಖ್ಯವಾಗಿತ್ತು. ಅವರನ್ನು ನೋಡಿ ನಾವೂ ಧಿಡೀರನೆ ಶ್ರೀಮಂತರಾಗಬೇಕೆಂಬ ಆಶೆಯಿಂದ ನಾವೇ ಅವರಿಗೆ ನೆರವಾದೆವು, ಪ್ರೋತ್ಸಾಹಿಸಿದೆವು. ಆಗ ಅವರು ಇಲ್ಲಿ ಕಾಲೂರಿ ನಿಂತರು. ಇಲ್ಲಿಯ ರಾಜರ ಒಳಜಗಳಗಳು ಅವರ ಅಧಿಕಾರ ಸ್ಥಾಪನೆಗೆ ಸಹಾಯ ಮಾಡಿದವು. ಹಾಗೆ ನೋಡಿದರೆ ಆಧುನಿಕ ನಾಗರಿಕತೆಯೇ ನಮ್ಮ ಮೊದಲ ವೈರಿ. ಇದು ಸಾಮ್ರಾಜ್ಯಶಾಹಿಗಿಂತ, ವಸಾಹತುಶಾಹಿಗಿಂತ ಹೆಚ್ಚು ಕೆಟ್ಟದ್ದು. ಕ್ರೂರವಾದದ್ದು. ಹೆಚ್ಚು ದುಷ್ಪರಿಣಾಮ ಬೀರುವಂತಹದ್ದು. ಆಧುನಿಕ ನಾಗರಿಕತೆ ಅಂದರೆ ಪಾಶ್ಚಾತ್ಯರ ನಾಗರಿಕತೆ. ಯಂತ್ರ ಕಾರ್ಖಾನೆಗಳು ಅದರ ಮುಖ್ಯ ಲಕ್ಷಣಗಳು. ಅದಕ್ಕೆ ಭಾರತೀಯರು ಮಾತ್ರ ಬಲಿಪಶು ಆಗುತ್ತಿಲ್ಲ ಇಂಗ್ಲಿಷರೂ ಆಗುತ್ತಿದ್ದಾರೆ.' ಭಾರತೀಯರ ಪಾರತಂತ್ರ್ಯಕ್ಕೆ ಬ್ರಿಟಿಷರೇ ಕಾರಣ ಎಂದು ಬಹುಜನರು ಹೇಳುತ್ತಿದ್ದ ಕಾಲದಲ್ಲಿ ಗಾಂಧೀಜಿಯವರು ಅದನ್ನು ಬೇರೆ ರೀತಿಯಿಂದಲೇ ವ್ಯಾಖ್ಯಾನಿಸಿದರು. ಯಂತ್ರನಾಗರಿಕತೆಯ ಮೋಹಜಾಲದಲ್ಲಿ ಸಿಲುಕಿರುವ ಭಾರತೀಯರನ್ನು, ಅದರಿಂದ ಬಿಡುಗಡೆಗೊಳಿಸುವುದೇ ಸ್ವಾತಂತ್ರ್ಯ ಹೋರಾಟದ ಮೊದಲ ಮೆಟ್ಟಿಲು ಎಂದು ಭಾವಿಸಿದರು. ಗಾಂಧೀಜಿಯವರು ಸತ್ಯಾಗ್ರಹಕ್ಕೂ ಗ್ರಾಮಸ್ವರಾಜ್ಯಕ್ಕೂ ನೇರ ಸಂಬಂಧ ಕಲ್ಪಿಸಿದರು. ಗ್ರಾಮಸ್ವರಾಜ್ಯಕ್ಕೆ ಎಲ್ಲಿಲ್ಲದ ಮಹತ್ವ ಕೊಟ್ಟರು. ಆಧುನಿಕ ನಗರ ಸಂಸ್ಕೃತಿಯು ಪಾಶ್ಚಾತ್ಯ ಸಂಸ್ಕೃತಿಯ ತಳಹದಿಯೆಂಬುದು ಅವರ ಸ್ಪಷ್ಟವಾದ ನಿಲುವು ಆಗಿತ್ತು. ನಗರ ಸಂಸ್ಕೃತಿಯ ಕಡೆಗೆ ಹೋಗುವುದು ಎಂದರೆ ಪರಂಪರೆಯಿಂದ ಗಳಿಸಿಕೊಂಡು ಬಂದಿರುವ ಭಾರತೀಯ ಸಾಂಸ್ಕೃತಿಕ ಸಾಮಾಜಿಕ ಮೌಲ್ಯಗಳಿಗೆ ತಿಲಾಂಜಲಿ ಕೊಟ್ಟಂತೆ ಎಂದು ಗಾಂಧೀಜಿ ಗ್ರಾಮಸ್ವರಾಜ್ಯದ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು.



ಕೆಲವು ವರ್ಷಗಳ ಹಿಂದೆ ಕರ್ನಾಟಕ ರಾಜ್ಯ ರೈತ ಸಂಘವು ಮೈಸೂರಿನಲ್ಲಿ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಲಾ ವಿಯಾ ಕ್ಯಾಂಪೆಸಿನಾ ಸಂಘಟಕ ಪೀಟರ್ ರೋಸೆಟ್ ರೈತರಿಗೆ ಹೇಳಿದ ಮಾತುಗಳನ್ನು ಗಮನಿಸಬೇಕು: 'ಕೃಷಿಯಲ್ಲಿ ಯಂತ್ರೋಪಕರಣ ಬಳಸಿ ಭೂತಾಯಿ ಹೊಟ್ಟೆ ಬಗೆಯುವ ಕೆಲಸ ಮಾಡಬೇಡಿ. ವಿಷಮುಕ್ತ ಆಹಾರ ಪದಾರ್ಥ ಉತ್ಪಾದನೆ ಮತ್ತು ರಾಸಾಯನಿಕ ಮುಕ್ತ ಕೃಷಿ ಇಂದಿನ ಅಗತ್ಯವಾಗಿದೆ. ನೈಸರ್ಗಿಕ ಕೃಷಿ ವಿಧಾನವನ್ನು ಜಗತ್ತಿನ ಎಲ್ಲ ರೈತರೂ ಒಪ್ಪಿಕೊಳ್ಳಬೇಕು. ಬೆಳೆಗೆ ಬೇಕಾದ ಜೈವಿಕ ಅಂಶಗಳನ್ನು ಮಣ್ಣಿನಲ್ಲೇ ಉಳಿಸಿಕೊಳ್ಳಬೇಕು. ಬಿತ್ತನೆಗೆ ದೇಸಿ ಬೀಜಗಳನ್ನು ಬಳಸಬೇಕು. ಸೂಕ್ಷ್ಮಜೀವಿಗಳ ಜೈವಿಕ ಚಟುವಟಿಕೆಗೆ ಧಕ್ಕೆ ಬಾರದಂತೆ ಕೃಷಿ ಕೈಕೊಳ್ಳಬೇಕು' ಎಂದು ನೈಸರ್ಗಿಕ ಕೃಷಿಯತ್ತ ಮರಳುವಂತೆ ಅವರು ರೈತ ಸಂಘಟನೆಗಳಿಗೆ ಕರೆಯಿತ್ತರು. (ಪ್ರಜಾವಾಣಿ ೭–೧೧–೨೦೧೧) ಇದೇ ತರಹದ ಮಾತುಗಳು ಇತ್ತೀಚೆಗೆ ದೊಡ್ಡ ದನಿಯಲ್ಲಿ ಕೇಳಿಬರುತ್ತಿವೆ.

ಯಂತ್ರಗಳನ್ನು ಕಳಚುವುದರಲ್ಲಿಯೇ ನಿಜವಾದ ಸುಖವಿದೆ ಎಂದು, ನೈಸರ್ಗಿಕ ಬದುಕಿಗೆ ಹೊರಳದೆ ನೆಮ್ಮದಿ ಸಾಧ್ಯವಿಲ್ಲವೆಂದು ಪ್ರಾಜ್ಞರು ಎಚ್ಚರಿಸುತ್ತಲೇ ಇದ್ದಾರೆ. ಗಾಂಧೀಜಿ ನೂರಾರು ವರ್ಷಗಳ ಹಿಂದೆಯೇ ಯಂತ್ರಗಳನ್ನು ಕಳಚುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟರು. ಗಾಂಧೀಜಿಯವರು ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಿದರು. ತಾವೇ ಚರಕಾದಿಂದ ನೂಲು ತೆಗೆದು, ನೆಯ್ದು, ಖಾದಿ ಬಟ್ಟೆಯನ್ನು ಧರಿಸಿದರು. ಸಹಜ ಕೃಷಿ, ಗುಡಿ ಕೈಗಾರಿಕೆಗಳ ಉತ್ಪಾದನೆಗಳಿಗೆ ಮಹತ್ವ ಕೊಟ್ಟರು. ಭಾರತ ಹಳ್ಳಿಗಳ ದೇಶ. ಒಂದು ಹಳ್ಳಿ ಹೇಗೆ ಸ್ವತಂತ್ರ–ಸ್ವಾವಲಂಬಿಯಾಗಿರಬೇಕೆಂಬುದನ್ನು ಸೇವಾಗ್ರಾಮಗಳ ಮೂಲಕ ತೋರಿಸಿಕೊಟ್ಟರು. 'ಗಿಡಕ್ಕೆ ನೀರೆರೆದರೆ ಮೇಲೆ

ಪಲ್ಲವಿಸಿತ್ತು ನೋಡಾ' ಎಂಬಂತೆ ಗ್ರಾಮಸ್ವರಾಜ್ಯದ ಚಟುವಟಿಕೆಗಳೆಲ್ಲ ಸ್ವಾತಂತ್ರ್ಯ ಚಳುವಳಿಗೆ ಅಸ್ತ್ರಗಳಾಗಿ ಪರಿಣಮಿಸಿದವು. ಗಾಂಧೀಜಿಯವರ ತತ್ವ ಆದರ್ಶಗಳಿಂದ ಪ್ರಭಾವಿತರಾಗಿ ಅವರ ಚಟುವಟಿಕೆಗಳಿಂದ ಪ್ರೇರಿತರಾಗಿ ಜನರು ದೇಶದ ನಾನಾ ಕಡೆಗೆ ಸೇವಾಗ್ರಾಮಗಳನ್ನು ಪ್ರಾರಂಭಿಸಿದರು. ಗಾಂಧೀಜಿಯವರ ಅನುಯಾಯಿಗಳಿಂದ ಕರ್ನಾಟಕದಲ್ಲಿಯೂ ಸೇವಾಗ್ರಾಮಗಳು ತಲೆಯೆತ್ತಿದವು. ಅವುಗಳಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಸಮೀಪದ ಬೆಂಗೇರಿ ಕೂಡ ಒಂದಾಗಿತ್ತು.

೧೮೫೭ ರಲ್ಲಿ ಸಿಪಾಯಿ ದಂಗೆ ಆರಂಭವಾದಾಗಲೂ, ಕರ್ನಾಟಕ ಅದರಲ್ಲಿ ಭಾಗವಹಿಸಿತು. ಗುಲಬರ್ಗಾ ಜಿಲ್ಲೆಯ ಸುರಪುರದ ವೆಂಕಟಪ್ಪ ನಾಯಕನು ರೋಹಿಲರನ್ನು ಮತ್ತು ಅರಬ್ಬರನ್ನು ಸೈನ್ಯಕ್ಕೆ ಸೇರಿಸಿಕೊಂಡು, ನಾನಾ ಸಾಹೇಬನೊಡನೆ ಸಂಪರ್ಕವನ್ನು ಬೆಳೆಸಿದ. ಈ ಕಾಲದಲ್ಲಿ ೧೮೫೭ ರಲ್ಲಿ ಧಾರವಾಡ, ಬೆಳಗಾಂ ಮತ್ತು ಕೊಲ್ಲಾಪುರಗಳಲ್ಲಿ ದಂಗೆ ನಡೆಯಿತು. ಜಮಖಂಡಿಯ ರಾಜ ಪಟವರ್ಧನ ಇಂಗ್ಲಿಷರಿಗೆ ಸೆರೆಸಿಕ್ಕಿದ. ಅನೇಕ ಸೈನಿಕರು ಕೊಲ್ಲಲ್ಪಟ್ಟರು, ಮೂರನೆ ದಿವಸ ಬ್ರಿಟಿಷರು ದೊಡ್ಡ ದಂಡಿನೊಡನೆ ಬಂದು ಪಟವರ್ಧನನನ್ನು ಸೋಲಿಸಿ ಸೆರೆಹಿಡಿದರು. ಅಪಮಾನವನ್ನು ಸಹಿಸದ ಅವನು ಆತ್ಮಹತ್ಯೆ ಮಾಡಿಕೊಂಡನು. ಧಾರವಾಡ ಜಿಲ್ಲೆಯ ನರಗುಂದದ ಪಾಳೆಯಗಾರ ನಾನಾಸಾಹೇಬ, ಮುಂಡರಗಿಯ ಭೀಮಯ್ಯ, ಹಮ್ಮಿಗಿ ಕೆಂಚಣ್ಣಗೌಡ ಮತ್ತು ಆನೆಗುಂದಿ ಶ್ರೀ ರಂಗರಾಯ ಮೊದಲಾದವರೊಡಗೂಡಿ ಇಂಗ್ಲಿಷರ ವಿರುದ್ಧ ದಂಗೆಯೆದ್ದರು. ಸೈನ್ಯವನ್ನು ಸೇರಿಸಿ ಯುದ್ಧ ಮಾಡಿದರು. ಇಂಗ್ಲಿಷರು ಕಷ್ಟಪಟ್ಟು ನರಗುಂದದ ಕೋಟೆಯನ್ನು ಮುತ್ತಿದರು. ಅದೇ ರೀತಿ ಮುಂಡರಗಿ ಭೀಮಯ್ಯನು ಹೋರಾಡಿ ಕೊನೆಗೆ ಜೂನ್ ೧೮೫೮ರಲ್ಲೇ ಶರಣಾಗತನಾದನು. ಹಲಗಲಿಯ ಬೇಡರು ಬಿಜಾಪುರದ ಬಳಿ ಇಂಗ್ಲಿಷರಿಗೆ ತೊಂದರೆ ಕೊಟ್ಟರು. ಕರ್ನಾಟಕದ ಗ್ರಾಮ ಗ್ರಾಮಗಳಲ್ಲಿ ಇಂಗ್ಲಿಷರಿಗೆ ಸಾಕಷ್ಟು ಕಷ್ಟನಷ್ಟಗಳನ್ನುಂಟು ಮಾಡಿದರು. ವರ್ಷಗಳು ಉರುಳಿದ ಮೇಲೂ ಇಂತಹ ಜನದಂಗೆಗಳು ನಡೆಯುತ್ತಲೇ ಇದ್ದವು. ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಹೋರಾಟದಲ್ಲಿ ಧಾರವಾಡ ಜಿಲ್ಲೆಯ ಪಾತ್ರವೂ ಅತಿ ಮುಖ್ಯವಾದುದು. ಅದರಲ್ಲೂ ರಾಷ್ಟ್ರಧ್ವಜವನ್ನು ನಿರ್ಮಿಸುವ ಮಹಾಪಾತ್ರವನ್ನು ಧಾರವಾಡ ಜಿಲ್ಲೆಯ ಗರಗ



ಮತ್ತು ಬೆಂಗೇರಿ ಊರುಗಳು ತುಂಬ ಅಚ್ಚುಕಟ್ಟಾಗಿ ನಿರ್ವಹಿಸಿದವು ಎಂಬುದು ಗಮನಾರ್ಹವಾದ ಸಂಗತಿ.

* * * *

ರಾಷ್ಟ್ರಧ್ವಜಗಳು ಬೆಂಗೇರಿಯಲ್ಲಿ ಇಂದು ಸಿದ್ಧಪಡಿಸಲಾಗುತ್ತಿದೆ. ಈ ಧ್ವಜದ ಇತಿಹಾಸವನ್ನು ಸ್ವಲ್ಪ ಅವಲೋಕಿಸಿದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಧ್ವಜದ ಪಾತ್ರ ಏನಿತ್ತು ಎಂಬುದರ ಸಮಗ್ರ ಪರಿಕಲ್ಪನೆ ನಮಗೆ ಮೂಡುತ್ತದೆ.

ಬೆಂಗೇರಿಯಲ್ಲಿ ರಾಷ್ಟ್ರಧ್ವಜ ನಿರ್ಮಾಣದ ಸಂಸ್ಥೆಯನ್ನು ಹುಟ್ಟುಹಾಕಿದ ವೆಂಕಟೇಶ ಮಾಗಡಿ ಅವರು ಸರದಾರ ವೀರನಗೌಡರ ಮಗಳು ಲೀಲಾವತಿ ಅವರನ್ನು ಮದುವೆಯಾದವರು. ಹೀಗಾಗಿ ಮಾವನ ಆದರ್ಶ ಹೋರಾಟದ ಮಾರ್ಗದಲ್ಲಿ ಅವರು ಮುನ್ನಡೆದರು. ಮಾವ ವೀರನಗೌಡರ ಸ್ವಾತಂತ್ರ್ಯ ಹೋರಾಟವೂ ಅವಿಸ್ಮರಣೀಯವಾದುದು. ಕೆ.ಎಲ್.ಇ. ಸಂಸ್ಥೆಯ ಸಂಸ್ಥಾಪಕರಲ್ಲಿ ಕೊನೆಯವರಾದ ಸರದಾರ ವೀರನಗೌಡರು ವಲ್ಲಭ ಭಾಯಿ ಪಟೇಲರಂತೆ ದಿಟ್ಟ ಹೋರಾಟಗಾರರು. ಅದಕ್ಕಾಗಿಯೇ ಅವರಿಗೆ ಸರದಾರ ಎಂಬ ವಿಶೇಷಣ ಅರ್ಥವಂತಿಕೆಯನ್ನು ಪಡೆದುಕೊಂಡಿತು. ಶಿಕ್ಷಣಕ್ಕಾಗಿ ಹಗಲಿರುಳು ಹೋರಾಡಿದ ವೀರನಗೌಡರು ವಿಶೇಷವಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಆದ್ಯತೆಯನ್ನು ಕೊಟ್ಟರು. ಗಾಂಧೀಜಿಯವರು ಆರಂಭಿಸಿದ ಅಸ್ಪೃಶ್ಯತಾ ನಿವಾರಣಾ ಚಳುವಳಿಗೆ ಕರ್ನಾಟಕದಲ್ಲಿ ದೊಡ್ಡ ಭಿತ್ತಿಯನ್ನು ಕೊಟ್ಟ ಕೀರ್ತಿ ವೀರನಗೌಡರದು.

೧೦ ಏಪ್ರಿಲ್ ೧೮೮೮ರಂದು ಧಾರವಾಡ ಜಿಲ್ಲೆಯ ಹಿರೇಕೆರೂರ ತಾಲೂಕಿನ 'ಕಚವಿ' ಗ್ರಾಮದಲ್ಲಿ ವೀರನಗೌಡರು ಜನಿಸಿದರು. ಸರಕಾರದ ಶಿಷ್ಯವೇತನ ಪಡೆದು, ಪುಣೆಯ ಕೃಷಿ ಕಾಲೇಜಿನಲ್ಲಿ ಪದವಿ ಪಡೆದರು. ಸಮಾಜಕ್ಕೆ ತಮ್ಮನ್ನು ಅರ್ಪಿಸಿಕೊಳ್ಳಬೇಕೆಂಬ ಹಂಬಲದಿಂದ ಬೆಳಗಾವಿಗೆ ಬಂದು ಸಪ್ತರ್ಷಿ ಮಂಡಲ ಸೇರಿಕೊಂಡರು. ೧೯೨೪ರಲ್ಲಿ ಬೆಳಗಾವಿಯಲ್ಲಿ ೩೯ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಜರುಗಿತು. ಈ ಅಧಿವೇಶನಕ್ಕೆ ಅಧ್ಯಕ್ಷರಾಗಿ ಬಂದವರು ಮಹಾತ್ಮಾ ಗಾಂಧೀಜಿಯವರು. ವೀರನಗೌಡರು ಗಾಂಧೀಜಿಯವರನ್ನು ಭೇಟಿ ಹರಿಜನೋದ್ಧಾರ ಕಾರ್ಯ ಮಾಡಲು ಪ್ರೇರಣೆ ಪಡೆದರು. ದಲಿತರ ಮಕ್ಕಳನ್ನು ದತ್ತು ಪಡೆದು ಅವರ ಏಳ್ಗೆಗೆ ಶ್ರಮಿಸಿದರೆ ನನ್ನ

ಧ್ಯೇಯ ಸಾರ್ಥಕವೆಂದು ಗಾಂಧೀಜಿ ವೀರನಗೌಡರಿಗೆ ಹೇಳಿದರು. ದಲಿತರ ಸೇವೆಗಾಗಿಯೇ ವೀರನಗೌಡರು ತಮ್ಮ ಬದುಕನ್ನು ಮೀಸಲಿಟ್ಟರು. ಒಮ್ಮೆ ೬೦ ಜನ ದಲಿತ ವಿದ್ಯಾರ್ಥಿಗಳನ್ನು ಮನೆಗೆ ಕರೆದುಕೊಂಡು ಬಂದು ಊಟ ನೀಡಿದರು. ಇದರಿಂದ ಸಂಪ್ರದಾಯವಾದಿಗಳು ಇವರಿಗೆ ಬೆದರಿಕೆ ಹಾಕಿದರು. ಸಮಾಜದಿಂದ ಬಹಿಷ್ಕರಿಸುವುದಾಗಿ ಹೇಳಿದರು. ಆದರೆ ವೀರನಗೌಡರು ಯಾವುದಕ್ಕೂ ಅಂಜದೆ ತಮ್ಮ ಧ್ಯೇಯ ಸಾಧನೆಗಾಗಿ ಮುಂದಡಿಯಿಟ್ಟರು.

೧೯೨೮ರಲ್ಲಿ ಕಾಂಗ್ರೆಸ್ ಅಧಿವೇಶನ ಕಲ್ಕತ್ತದಲ್ಲಿ ಜರುಗಿತು. ವೀರನಗೌಡರು ಈ ಅಧಿವೇಶನಕ್ಕೆ ತಮ್ಮ ಎಂಟು ವರ್ಷದ ಮಗಳು ಲೀಲಾವತಿ ಅವರನ್ನು ಕರೆದುಕೊಂಡು ಹೋದರು. ಅಲ್ಲಿಯೇ ವಿಶ್ವಕವಿ ರವೀಂದ್ರರು ಸ್ಥಾಪಿಸಿದ್ದ ಶಾಂತಿನಿಕೇತನಕ್ಕೆ ಭೇಟಿ ನೀಡಿದರು. ತಮ್ಮ ಮಗಳು ಲೀಲಾವತಿಯನ್ನು ಅಲ್ಲಿಯೇ ಕಲಿಯಲು ಬಿಟ್ಟು ಬಂದರು. ಇದರಿಂದ ರವೀಂದ್ರರೊಂದಿಗೆ ಅತ್ಯಂತ ಆತ್ಮೀಯತೆ ಉಳ್ಳವರಾದರು.

೧೯೩೦ರಲ್ಲಿ ಬ್ರಾಹ್ಮಣೇತರ ಚಳುವಳಿಯ ಮುಂದಾಳತ್ವವನ್ನು ವಹಿಸಿದರು. ಸ್ವಾತಂತ್ರ್ಯ ಹೋರಾಟದಲ್ಲಿಯೂ ಭಾಗವಹಿಸಿದರು. ಸರಕಾರ ವೀರನಗೌಡರನ್ನು ಆರು ಸಲ ಜೈಲಿಗೆ ಕಳಿಸಿತು. ಒಮ್ಮೆ ವೀರನಗೌಡರು ಹಿಂಡಲಗಾ ಜೈಲಿನಲ್ಲಿದ್ದರು. ಒಂಬತ್ತು ತಿಂಗಳು ಶಿಕ್ಷೆಯಾಗಿತ್ತು. ಶಾಂತಿನಿಕೇತನದಲ್ಲಿದ್ದ ಮಗಳು ಲೀಲಾವತಿ ಅವರಿಗೆ ವಿಷಮಶೀತ ಜ್ವರಬಂದು ತುಂಬ ಬಳಲಿದ್ದರು. ಅಲ್ಲದೆ ಅವರ ದ್ವಿತೀಯ ಪತ್ನಿ ನಾಗಮ್ಮನವರು ಅನಾರೋಗ್ಯದಿಂದ ಬಳಲುತ್ತಿದ್ದರು. 'ಪೆರೋಲ್' ಮೇಲೆ ಹೊರಬರಲು ವೀರನಗೌಡರು ಪ್ರಯತ್ನಿಸಿದರು, ಫಲಕಾರಿಯಾಗಲಿಲ್ಲ. ಆಗ ವಿಶ್ವಕವಿ ರವೀಂದ್ರರು ಮುಂಬೈ ಗವರ್ನರ್‌ಗೆ ಪತ್ರ ಬರೆದು ವೀರನಗೌಡರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲು ಕೇಳಿಕೊಂಡರು. ವಿಶ್ವಕವಿಯ ಮಾತಿಗೆ ಮನ್ನಣೆ ನೀಡಿ ಮುಂಬೈ ಗವರ್ನರ್ ವೀರನಗೌಡರನ್ನು ಬಿಡುಗಡೆ ಮಾಡಿದರು. ತಕ್ಷಣ ವೀರನಗೌಡರು ಕಲ್ಕತ್ತಾಗೆ ಹೋಗಿ ಮಗಳ ಆರೈಕೆ ಮಾಡಿದರು. ನಂತರ ಮಗಳು ಲೀಲಾವತಿ ವೆಂಕಟೇಶ ಮಾಗಡಿ ಅವರನ್ನು ಪ್ರೀತಿಸಿ ಮದುವೆಯಾಗುವುದಾಗಿ ಹೇಳಿದರು. ಮಗಳ ಮಾತಿಗೆ ಮನ್ನಣೆ ನೀಡಿದ ಗೌಡರು ಮದುವೆಗೆ ಸಮ್ಮತಿಸಿದರು. ಮಗಳ ಮದುವೆ ಕಾರಣದಿಂದ ಅನೇಕ ಅಂತರಜಾತಿಯ ವಿವಾಹಗಳನ್ನು ನೆರವೇರಿಸಿದರು.



ಮಗಳು ಲೀಲಾವತಿ ಸ್ವಾತಂತ್ರ್ಯ ಚಳುವಳಿ, ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸಿ ನಂತರ ಕರ್ನಾಟಕ ಸರಕಾರ ಅಸ್ತಿತ್ವಕ್ಕೆ ಬಂದ ನಂತರ ಕೈಗಾರಿಕಾ ಮಂತ್ರಿಯಾಗಿ ಸೇವೆ ಸಲ್ಲಿಸಿದರು. ವೀರನಗೌಡರು ೧೯೪೮ರಿಂದ ೫೭ರವರೆಗೆ ಶಾಸನ ಸಭೆಗೆ ಆಯ್ಕೆಯಾದರು. ನಂತರ ಏಕೀಕರಣ ಹೋರಾಟದಲ್ಲಿ ಉಪವಾಸ ಸತ್ಯಾಗ್ರಹಕ್ಕೆ ಕುಳಿತರು. ಪ್ರಧಾನಿ ಜವಾಹರಲಾಲ ನೆಹರು ಅವರು ವೀರನಗೌಡರನ್ನು ದೆಹಲಿಗೆ ಕರೆಸಿಕೊಂಡು, ಏಕೀಕರಣ ಮಾಡುವುದಾಗಿ ಭರವಸೆ ಕೊಟ್ಟರು.

ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ವೀರನಗೌಡರು ಅಪಾರವಾದ ಸೇವೆ ಸಲ್ಲಿಸಿದರು. ಅಕ್ಕಮಹಾದೇವಿ ಟ್ರೇನಿಂಗ್ ಕಾಲೇಜು, ಮಹಿಳಾ ವಿದ್ಯಾಪೀಠ, ಕುರುಡರ ಬಾಲಿಕಾಶಾಲೆ, ಮಹಿಳಾ ಶಿಕ್ಷಕಿಯರ ಟ್ರೇನಿಂಗ್ ಕಾಲೇಜುಗಳನ್ನು ಸ್ಥಾಪಿಸಿದರು. ಮಹಾತ್ಮಾ ಗಾಂಧೀಜಿಯವರು ವಾರ್ಧಾದಲ್ಲಿ ಬಾಲಿಕಾಶ್ರಮ ಸ್ಥಾಪಿಸಿದರು. ಅದೇ ಮಾದರಿಯಲ್ಲಿ ವೀರನಗೌಡರು ಹುಬ್ಬಳ್ಳಿಯಲ್ಲಿ ಬಾಲಿಕಾಶ್ರಮ ಸ್ಥಾಪಿಸಿದರು. ಇದು ದೇಶದ ಗಮನ ಸೆಳೆಯಿತು.

೧೯೬೧ರಲ್ಲಿ ಭಾರತ ಸರಕಾರ ವೀರನಗೌಡರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು. ೧೯೬೬ರಲ್ಲಿ ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ ನೀಡಿತು. ಇಂಥ ಹಿರಿಯ ಚೇತನ ೩–೮–೧೯೭೮ರಲ್ಲಿ ನಿಧನರಾದರು.

ಕೇಸರಿ, ಬಿಳಿ ಹಾಗೂ ಹಸಿರು ಬಣ್ಣಗಳ ತ್ರಿವರ್ಣ ರಾಷ್ಟ್ರಧ್ವಜ ಈ ದೇಶದ ಅಸ್ಮಿತೆ. ಹಳ್ಳಿಯಿಂದ ದಿಲ್ಲಿಯವರೆಗೆ ಹಾರಾಡುವ ಧ್ವಜದ ಎದುರು ನಿಂತರೆ, ಎಂತಹವರಿಗೂ ದೇಶಪ್ರೇಮ ಎದೆ ತುಂಬಿ ಬರುತ್ತದೆ. ಭಾರತೀಯತೆಯ ಸಂಕೇತವಾಗಿರುವ ಈ ರಾಷ್ಟ್ರಧ್ವಜ ತಯಾರಾಗುವುದು ಕರ್ನಾಟಕದ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ನಗರದ ಬೆಂಗೇರಿಯಲ್ಲಿರುವ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದಲ್ಲಿ. ಬ್ಯುರೊ ಆಫ್ ಇಂಡಿಯನ್ ಸ್ಟ್ಯಾಂಡರ್ಡ್‌ನಿಂದ (ಐಬಿಎಸ್) ಮಾನ್ಯತೆ ಪಡೆದ ದೇಶದ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆ ಈ ಸಂಘದ್ದು.

ಸ್ವಾತಂತ್ರ್ಯ ಹೋರಾಟದ ಜತೆ ಜತೆಗೆ ಬೆಳೆದ ಖಾದಿ ಚಳವಳಿಯ ಭಾಗವಾಗಿ, ೧೯೫೭ ರ ನವೆಂಬರ್ ೧ ರಂದು ಬೆಂಗೇರಿಯಲ್ಲಿ ಸಂಘ ಸ್ಥಾಪನೆಯಾಯಿತು. ಸ್ವಾತಂತ್ರ್ಯ ಹೋರಾಟಗಾರರೂ ಆಗಿದ್ದ ವೆಂಕಟೇಶ ಮಾಗಡಿ

ಸಂಘದ ಮೊದಲ ಅಧ್ಯಕ್ಷರಾದರೆ, ಶ್ರೀರಂಗ ಕಾಮತ್ ಮೊದಲ ಉಪಾಧ್ಯಕ್ಷ. ಸದಸ್ಯರಾಗಿದ್ದ ಅಂಕೋಲಾದ ಎಚ್. ಎ. ಪೈ, ಬಿಜಾಪುರದ ಪಿ. ಎಚ್. ಅನಂತ ಭಟ್, ಬೆಳಗಾವಿಯ ಜಯದೇವರಾವ್ ಕುಲಕರ್ಣಿ, ಧಾರವಾಡದ ಬಿ. ಜೆ. ಗೋಖಲೆ, ಚಿತ್ರದುರ್ಗದ ವಾಸುದೇವರಾವ್ ಹಾಗೂ ರಾಯಚೂರಿನ ಬಿ. ಎಚ್. ಇನಾಂದಾರ್ ಅವರ ಕನಸಿನ ಕೂಸು ಈ ಸಂಘ. ಬೆಂಗೇರಿ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ಆವರಣದಲ್ಲಿರುವ, ಸಂಘದ ಸಂಸ್ಥಾಪಕ ವಿ. ಟಿ. ಮಾಗಡಿ ಹಾಗೂ ಅವರ ಪತ್ನಿ ಧಾರವಾಡ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘದ ಸಂಸ್ಥಾಪಕರಾದ ಲೀಲಾವತಿ ವೆಂ. ಮಾಗಡಿ ಅವರ ಸ್ಮರಣಾರ್ಥ ಪುತ್ಥಳಿ

ಅಪ್ಪಟ ಗಾಂಧಿವಾದಿಗಳಾದ ಎಲ್ಲರೂ ಖಾದಿ ಸಂಸ್ಥೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ, ತಲಾ ೧೦,೫೦೦ ಕೊಡುಗೆಯೊಂದಿಗೆ ಸಂಘಟವನ್ನು ಕಟ್ಟಿ ಬೆಳೆಸಿದರು. ಅವರ ದೂರದೃಷ್ಟಿಯಿಂದಾಗಿ ರಾಜ್ಯದಾದ್ಯಂತ ೫೪ ಸಂಸ್ಥೆಗಳು ಸಂಘದ ನೆರಳಿನಲ್ಲಿ ರಾಷ್ಟ್ರಧ್ವಜ ಹಾಗೂ ಖಾದಿ ಉತ್ಪನ್ನಗಳನ್ನು ತಯಾರಿಸಿ, ಮಾರಾಟ ಮಾಡುತ್ತಿವೆ. ೧೨ ಎಕರೆ ವಿಶಾಲವಾದ ಜಾಗದಲ್ಲಿರುವ ಸಂಘವು, ೬೪ ವರ್ಷಗಳಿಂದ ನೂರಾರು ಕುಟುಂಬಗಳನ್ನು ಸಲಹಿಕೊಂಡು ಬಂದಿದೆ. ಖಾದಿ ಉತ್ಪನ್ನಗಳಿಗಷ್ಟೇ ಸೀಮಿತಗೊಂಡಿದ್ದ ಸಂಘದಲ್ಲಿ ರಾಷ್ಟ್ರಧ್ವಜ ತಯಾರಿಸುವ ಕನಸು ಮೊಳಕೆಯೊಡೆದಿದ್ದು ೨೦೦೪ ರಲ್ಲಿ ಬಿ. ಎಸ್. ಪಾಟೀಲ ಅವರು ಅಧ್ಯಕ್ಷರಾಗಿದ್ದಾಗ. ಅಂತಿಮವಾಗಿ ಬಿಐಎಸ್‌ನಿಂದ ೨೦೦೬ ರ ಫೆ. ೧೮ ರಂದು ಅನುಮತಿ ಸಿಕ್ಕಿತು. ಅಂದಿನಿಂದ ಆರಂಭಗೊಂಡ ಧ್ವಜಗಳ ತಯಾರಿಕೆ ಇಂದಿನವರೆಗೆ ನಡೆದುಕೊಂಡು ಬಂದಿದೆ. ಅದಕ್ಕೂ ಮುಂಚೆ ಮುಂಬೈ ಮೂಲದ ಖಾಸಗಿ ಸಂಸ್ಥೆಯೊಂದು ಧಾರವಾಡ ತಾಲ್ಲೂಕಿನ ಗರಗ ಖಾದಿ ಕೇಂದ್ರದಿಂದ ಬಟ್ಟೆಯನ್ನು ಪಡೆದುಕೊಂಡು ರಾಷ್ಟ್ರಧ್ವಜವನ್ನು ತಯಾರಿಸುತ್ತಿತ್ತು.

ಧ್ವಜ ತಯಾರಿಸಲು ಬೇಕಾದ ಬಟ್ಟೆಗೆ ಗುಣಮಟ್ಟದ ಅರಳೆ ಖರೀದಿಯಿಂದಿಡಿದು, ರಾಷ್ಟ್ರಧ್ವಜದ ಪ್ಯಾಕಿಂಗ್‌ವರೆಗಿನ ಕೆಲಸಗಳು ನಡೆಯುವ ದೇಶದ ಏಕೈಕ ಸಂಘ ನಮ್ಮದು. ಚರಕದಿಂದ ನೂಲು ತೆಗೆದು, ಕೈಮಗ್ಗದಿಂದ ತಯಾರಾದ ಬಟ್ಟೆಗಳು ಇಲ್ಲಿಗೆ ಬರುತ್ತವೆ. ಇಲ್ಲಿ ಬ್ಲೀಚಿಂಗ್, ಡೈಯಿಂಗ್, ಪ್ರಿಂಟಿಂಗ್, ಕಟ್ಟಿಂಗ್, ಸ್ಟಿಚ್ಚಿಂಗ್, ಐರನಿಂಗ್, ಟ್ಯಾಗಲ್ (ಅಡ್ಡಬೆಣೆ) ಪೋಣಿಸಿ ಅಂತಿಮವಾಗಿ ವಿವಿಧ ೯ ಅಳತೆಯ ರಾಷ್ಟ್ರಧ್ವಜಗಳನ್ನು ಮಾರಾಟಕ್ಕೆ ಸಿದ್ಧಪಡಿಸಲಾಗುತ್ತದೆ ಇದು ಧ್ವಜ ತಯಾರಿಕೆಯ ಹಂತಗಳ ವಿವರ.



ಆರಂಭದಲ್ಲಿ ಸಂಘದಲ್ಲಿ ೧೫೦೦ ಜನ ಕೆಲಸ ಮಾಡುತ್ತಿದ್ದರು. ಈಗ ಅದು ೮೦೦ ಕ್ಕೆ ಇಳಿಕೆಯಾಗಿದೆ. ಈ ಪೈಕಿ ಶೇ ೯೫ ರಷ್ಟು ಮಹಿಳೆಯರೇ ಎಂಬುದು ವಿಶೇಷ. ಸಂಘದ ಕ್ಯಾಂಪಸ್‌ನಲ್ಲಷ್ಟೇ ಅಲ್ಲದೆ ಬಾಗಲಕೋಟೆಯ ಗದ್ದಿನಕೇರಿ, ಬಾದಾಮಿ, ಬೀಳಗಿ ತಾಲ್ಲೂಕಿನ ಹಳ್ಳಿಗಳಲ್ಲೂ ಸಂಘಕ್ಕಾಗಿ ದುಡಿಯುವ ಕಾರ್ಮಿಕರಿದ್ದಾರೆ. ಅವರ ಬ್ಯಾಂಕ್ ಖಾತೆಗಳಿಗೆ ಸಂಘವು ವಾರಕ್ಕೊಮ್ಮೆ ಸಂಬಳ ಪಾವತಿಸುತ್ತದೆ. ಈ ಕಾರಣಕ್ಕಾಗಿ ಬೆಂಗೇರಿ ಇಂದು ರಾಷ್ಟ್ರದ ಗಮನ ಸೆಳೆದ ಊರಾಗಿದೆ.

* * * *

ಭಾರತದಲ್ಲಿ ಸ್ವಾತಂತ್ರ್ಯದ ಗಾಳಿ ಬೀಸಲಾರಂಭಿಸಿದಾಗ ಜನರಿಗೆ ತಮ್ಮ ಅರಿವಿನ ಬಗ್ಗೆ ಜಿಜ್ಞಾಸೆ ಮೂಡಲಾರಂಭಿಸಿತು. ಒಂದು ದೇಶ. ಆ ದೇಶಕ್ಕೆ ಒಂದು ಭಾಷೆ, ಒಂದು ಧ್ವಜ–ಹೀಗೆ ದೇಶಪ್ರೇಮದ ವಿಚಾರಗಳು ಜನರ ಮನದಲ್ಲಿ ಮೊಳಕೆಯೊಡೆಯಲಾರಂಭಿಸಿದವು. ಭಾರತದ ರಾಜಕೀಯ ನಕ್ಷೆಯ ಮೇಲೆ ಸ್ವಾತಂತ್ರ್ಯದ ಹಂಬಲದ ಗೆರೆಗಳು ಕಾಣಿಸಿಕೊಳ್ಳಲಾರಂಭಿಸಿದವು. ಸ್ವಾತಂತ್ರ್ಯವೆಂದರೆ ಸ್ವರಾಜ್ಯ ಅಥವಾ ಸುರಾಜ್ಯ ಎಂಬ ಕಲ್ಪನೆಗಳು ಜನರ ಮನಸ್ಸನ್ನು ಆಕ್ರಮಿಸಿಕೊಂಡವು. ಬ್ರಿಟಿಷ್ ದಾಸ್ಯದ ವಿರುದ್ಧವಾಗಿ ಚಳುವಳಿಗಳು ಬಲಗೊಂಡವು. ಈ ಚಳುವಳಿಯ ಹಿಂದಿನ ಶಕ್ತಿ ಅರ್ಥಾತ್ ಮಹಾತ್ಮಾ ಗಾಂಧೀಜಿಯವರಾಗಿದ್ದರು. ಆದರೆ ಧ್ವಜದ ಕಲ್ಪನೆ ಒಡಮೂಡಿದ್ದು ೧೮೫೭ರ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮದ ನಂತರ. ಈ ಸಂಗ್ರಾಮವು ಭಾರತೀಯರ ದೃಷ್ಟಿಯಿಂದ ವಿಫಲವಾಗಿದ್ದರೆ, ಬ್ರಿಟಿಷರ ದೃಷ್ಟಿಯಲ್ಲಿ ಅವರಿಗೆ ಗೆಲುವನ್ನು ತಂದಿದ್ದಿತು. ಆಗ ಇಂಗ್ಲೆಂಡಿನ ಮಹಾರಾಣಿಯಾಗಿದ್ದ ವಿಕ್ಟೋರಿಯಾ, ಬ್ರಿಟಿಷ್ ಭಾರತಕ್ಕಾಗಿಯೇ ಒಂದು ಪ್ರತ್ಯೇಕವಾದ ಧ್ವಜವನ್ನು ರೂಪಿಸಿ ಅದನ್ನು ಬ್ರಿಟಿಷ್ ಭಾರತಾದ್ಯಂತ ಹಾರಿಸಬೇಕೆಂದು ಆಜ್ಞಾಪಿಸಿದಳು. ಈ ಧ್ವಜದ ಎಡ ಮೇಲ್ಭಾಗದಲ್ಲಿ ಯುನಿಯನ್‌ಜಾಕ್‌ದ ಚಿತ್ರವಿದ್ದು, ಬಲಗಡೆಗೆ ಒಂದು ನಕ್ಷತ್ರವನ್ನಿಟ್ಟು ಆ ನಕ್ಷತ್ರದ ತಲೆಮೇಲೆ ರಾಯಲ್ ಕಿರೀಟವನ್ನಿಡಲಾಗಿತ್ತು. ಈ ರೀತಿಯ

ಸರ್ಕಾರಿ ಧ್ವಜವು ೧೯೪೭ರವರೆಗೂ ಚಾಲ್ತಿಯಲ್ಲಿತ್ತೆಂದು ಹೇಳಿದರೆ ಎಲ್ಲರಿಗೂ ಅಚ್ಚರಿಯಾಗುವುದು ಸಹಜ; ಆದರೆ ಅದು ವಸ್ತುಸ್ಥಿತಿ.

೧೯೦೫ರಲ್ಲಿ ಬಂಗಾಲವು ವಿಭಜನೆಯಾಯಿತು. ಈ ವಿಭಜನೆಯಿಂದ ಇಡೀ ಭಾರತವು ಆಘಾತಕ್ಕೆ ಒಳಗಾಯಿತು. ರಾಷ್ಟ್ರಭಕ್ತರು ಬ್ರಿಟಿಷರ ಈ ಒಡೆದಾಳುವ ನೀತಿಯಿಂದ ರೋಸಿ ದಂಗೆ ಎದ್ದರು. ಆಗ ಬಂಗಾಲದಲ್ಲಿ ಕೆಲವರು 'ವಂದೇ ಮಾತರಂ' ಧ್ವಜವನ್ನು ಉಪಯೋಗಿಸಲಾರಂಭಿಸಿದರು. ಈ ಧ್ವಜದಲ್ಲಿ ಮೂರು ಬಣ್ಣಗಳನ್ನು ಉಪಯೋಗಿಸಲಾಗಿತ್ತು. ಧ್ವಜದ ಮೇಲ್ಭಾಗದಲ್ಲಿ (ಹಸಿರು ಬಣ್ಣ ಇದ್ದಲ್ಲಿ) ಎಂಟು ಬಿಳಿ ಬಣ್ಣದ ಕಮಲಗಳಿದ್ದರೆ, ಕೆಳಭಾಗದಲ್ಲಿ ಸೂರ್ಯ (ಕೆಂಪು ಬಣ್ಣ ಇದ್ದಲ್ಲಿ) ನಡುವೆ ಹಳದಿ ಬಣ್ಣ ಇದ್ದಲ್ಲಿ ಹಿಂದಿಯಲ್ಲಿ 'ವಂದೇ ಮಾತರಂ' ಎಂದು ಬರೆಯಲಾಗಿತ್ತು. ಈ ಧ್ವಜವನ್ನು ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಉಪಯೋಗಿಸಲಾಗಿತ್ತು. ಮೇಡಂ ಭಿಕಾಜಿ ಕಾಮಾರು ಈ ಧ್ವಜದಲ್ಲಿಯೇ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿ ಇನ್ನೊಂದು ಧ್ವಜವನ್ನು ರೂಪಿಸಿದರು. ಈ ಧ್ವಜವನ್ನು ಅವರು ಜರ್ಮನಿಯ ಸ್ಟುಟಗರ್ಟನಲ್ಲಿ ನಡೆದ ಎರಡನೆಯ ಜಾಗತಿಕ ಸಮಾಜವಾದಿಗಳ ಸಮ್ಮೇಳನದಲ್ಲಿ ಹಾರಿಸಿದರು. ಇದೇ ಕಾಲಕ್ಕೆ ಸಿಸ್ಟರ್ ನಿವೇದಿತಾ ಅವರು ಮಗದೊಂದು ಧ್ವಜವನ್ನು ತಯಾರಿಸಿದರು. ಈ ಧ್ವಜದ ನಡುವೆ ಮಿಂಚಿನ ಚಿತ್ರವಿದ್ದು ಸುತ್ತಲೂ ಒಂದು ನೂರಾ ಎಂಟು ದೀಪಗಳ ಬಾರ್ಡರ್ ಇತ್ತು. ಈ ಧ್ವಜದಲ್ಲೂ 'ವಂದೇ ಮಾತರಂ' ಎಂಬ ಒಕ್ಕಣೆ ಇತ್ತು. ಈ ಧ್ವಜವನ್ನು ೧೯೦೬ರ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪ್ರದರ್ಶಿಸಲಾಯಿತು.'

'ಮೇಡಂ ಭಿಕಾಜಿ ಕಾಮಾರಿಗೆ ಈ ಧ್ವಜವನ್ನು ತಯಾರಿಸಲು ಸಹಾಯ ಮಾಡಿದವರು ವೀರ ಸಾವರಕರ್ ಮತ್ತು ಶ್ಯಾಮಜಿ ಕೃಷ್ಣವರ್ಮಾ ಕಾಮಾ ೨೨ ಆಗಸ್ಟ್ ೧೯೦೭ರಲ್ಲಿ ಈ ಧ್ವಜವನ್ನು ವಿದೇಶಿ ನೆಲದ ಮೇಲೆ ಹಾರಿಸಿದರು. ವಿದೇಶಿ ನೆಲದ ಮೇಲೆ ಹಾರಿಸಿದ ಮೊಟ್ಟಮೊದಲ ಧ್ವಜವೆಂದು ಈ ಧ್ವಜಕ್ಕೆ ಮಹತ್ವವಿದೆ. ಮೇಡಂ ಕಾಮಾ ತನ್ನ ಧ್ವಜದಲ್ಲಿ ಮೂರು ಬಣ್ಣಗಳನ್ನು ಅಳವಡಿಸಿದ್ದರು– ಹಸಿರು (ಮೇಲೆ), ಭಗವಾ (ನಡುವೆ) ಹಾಗೂ ಕೆಂಪು (ಕೆಳಗೆ).

ಭಾರತೀಯರೆಲ್ಲರಿಗೂ ಸ್ವೀಕಾರಾರ್ಹವಾಗುವಂತಹ ಒಂದು ಧ್ವಜವನ್ನು ರೂಪಿಸಬೇಕೆಂದು ಮಹಾತ್ಮಾ ಗಾಂಧೀಜಿಯವರ ಆಶಯವಾಗಿತ್ತು. ಇದನ್ನು ಅವರು ಬಹಿರಂಗವಾಗಿಯೂ ಹೇಳಿದ್ದರು. ೧೯೧೬ರಲ್ಲಿ ಲೇಖಕರಾಗಿದ್ದ ಪಿಂಗಳಿ ವೆಂಕಯ್ಯರವರು ಒಂದು ಧ್ವಜವನ್ನು ತಯಾರಿಸಿ ಅದನ್ನು ಮಹಾತ್ಮಾ ಗಾಂಧೀಜಿಯವರಿಗೆ ತೋರಿಸಿದರು. ಈ ಧ್ವಜದಲ್ಲಿ ಹಸಿರು ಮತ್ತು ಕೆಂಪು ಬಣ್ಣಗಳನ್ನು ಅಳವಡಿಸಲಾಗಿದ್ದರೆ ನಡುವೆ ಚರಕಾದ ಚಿತ್ರವಿತ್ತು. ಪಿಂಗಳಿಯವರು ತನ್ನ ಕೈಯಾರೆ ನೇಯ್ದ ಖಾದಿಯಿಂದ ಈ ಧ್ವಜವನ್ನು ರೂಪಿಸಿದ್ದರು. ೧೯೧೭ರಲ್ಲಿ 'ಹೋಂ ರೂಲ್' ಚಳುವಳಿ ಆರಂಭವಾಯಿತು. ಆಗ ಬಾಲಗಂಗಾಧರ ಟಿಳಕರವರು ಒಂದು ಧ್ವಜ ರೂಪಿಸಿದರು. ಈ ಧ್ವಜದ ಬಲಮೂಲೆಯಲ್ಲಿ ಯುನಿಯನ್ ಜಾಕ್‌ದ ಚಿತ್ರವಿದ್ದರೆ, ಕೆಳಗಡೆ ಏಳು ನಕ್ಷತ್ರಗಳಿದ್ದವು. ಧ್ವಜದ ಎಡ ಮೇಲ್ಭಾಗದಲ್ಲಿ ಅರ್ಧಚಂದ್ರ ಮತ್ತು ಅದರ ಮೇಲೆ ಒಂದು ನಕ್ಷತ್ರವಿತ್ತು. ೧೯೨೧ರಲ್ಲಿ ಮಹಾತ್ಮಾ ಗಾಂಧೀಜಿಯವರ ಆಶಯದಂತೆ ಮೂರು ಬಣ್ಣಗಳ ಧ್ವಜವನ್ನು ರೂಪಿಸಲಾಯಿತು. ಎಲ್ಲಕ್ಕಿಂತ ಮೇಲ್ಭಾಗದಲ್ಲಿ ಬಿಳಿ, ನಡುವೆ ಹಸಿರು ಮತ್ತು ಕೆಳಭಾಗದಲ್ಲಿ ಕೆಂಪು ಬಣ್ಣ ಅಳವಡಿಸಲಾಗಿತ್ತು. ನಡುವೆ ಒಂದು ಚರಖಾವನ್ನೂ ಚಿತ್ರಿಸಲಾಗಿತ್ತು.



೧೯೩೧ರಲ್ಲಿ ಪಿಂಗಳಿ ವೆಂಕಯ್ಯ ಮತ್ತೊಂದು ಧ್ವಜವನ್ನು ರೂಪಿಸಿದರು. ಈ ಧ್ವಜದಲ್ಲಿ ಮೂರು ಬಣ್ಣಗಳನ್ನು ಅಳವಡಿಸಲಾಗಿತ್ತು. ಭಗವಾ ಬಣ್ಣ ಮೇಲ್ಭಾಗದಲ್ಲಿದ್ದರೆ ನಡುವೆ ಬಿಳಿ ಮತ್ತು ಕೆಳಗೆ ಹಸಿರು ಬಣ್ಣಗಳು ರಾರಾಜಿಸುತ್ತಿದ್ದವು. ಈ ಧ್ವಜವನ್ನು ಗಾಂಧೀಜಿಯವರು ಮೆಚ್ಚಿದ್ದರಿಂದ ಆಗ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಇದನ್ನು ಪ್ರದರ್ಶಿಸಲಾಯಿತು. ಗಾಂಧೀಜಿಯವರು ಈ ಧ್ವಜವನ್ನು ಕಾಂಗ್ರೆಸ್ಸಿನ ಅಧಿಕೃತ ಧ್ವಜವೆಂದು ಸಾರಿದರು.

೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದಿತು. ಆಗ ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನಿಯಮಿಸಿ ಭಾರತ ದೇಶಕ್ಕೆ ಅಧಿಕೃತವಾದ ಒಂದು ಧ್ವಜವನ್ನು ರೂಪಿಸಬೇಕೆಂದು ಈ ಸಮಿತಿಗೆ ಹೇಳಲಾಯಿತು. ಈ ಸಮಿತಿಯು ಅನೇಕ ಧ್ವಜಗಳನ್ನು ಪರಿಶೀಲಿಸಿ ೧೯೩೧ರಲ್ಲಿ ಪಿಂಗಳಿ ವೆಂಕಯ್ಯರವರು ರೂಪಿಸಿದ ಧ್ವಜವನ್ನು ಅಲ್ಪಸ್ವಲ್ಪ ಬದಲಾವಣೆಗಳಿಂದ ತನ್ನದನ್ನಾಗಿ ಸ್ವೀಕರಿಸಿತು. ಪಿಂಗಳಿಯವರು ತಾವು ತಯಾರಿಸಿದ ಧ್ವಜದ ನಡುವೆ 'ಚರಖಾ'ವನ್ನು ಇಟ್ಟಿದ್ದರೆ ಅದೀಗ ಅಲ್ಲಿ ಅಶೋಕ ಚಕ್ರವನ್ನು

ಅಳವಡಿಸಿಕೊಳ್ಳಲಾಯಿತು. ಈ ಮಾದರಿಯ ಧ್ವಜವನ್ನು ರಾಷ್ಟ್ರಧ್ವಜವಾಗಿ ಸ್ವೀಕರಿಸಲಾಯಿತು. ಈ ಧ್ವಜಕ್ಕೆ 'ತಿರಂಗಾ' ಎಂಬ ಹೆಸರನ್ನೂ ನೀಡಲಾಯಿತು. ತಿರಂಗಾ ಎಂದರೆ ಮೂರು ಬಣ್ಣಗಳು ಎಂದರ್ಥ. ಕೆಲವಡೆ ಈ ಧ್ವಜವನ್ನು 'ತ್ರಿವರ್ಣ' ಎಂದೂ ಕರೆಯುತ್ತಾರೆ. ತ್ರಿವರ್ಣ ಎಂದರೂ ಅದೇ ಅರ್ಥ.

೨೨ ಜುಲೈ ೧೯೪೭ರಲ್ಲಿ ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯ ಸಮಿತಿಯು ರಾಷ್ಟ್ರಧ್ವಜದ ಅಧಿಕೃತ ಸ್ವರೂಪವನ್ನು ಪ್ರಕಟಪಡಿಸಿದರು. ಧ್ವಜದ ನಡುವೆ ಇರುವ ಚಕ್ರವನ್ನು ಅಶೋಕನ ಸ್ತೂಪದಿಂದ ತೆಗೆದುಕೊಳ್ಳಲಾಗಿದೆ. ಚಕ್ರದಲ್ಲಿ ೨೪ ಗೆರೆಗಳಿವೆ. ಅದು ನೀಲಿ ಬಣ್ಣದಲ್ಲಿದೆ. ೨೨ ಜುಲೈ ೧೯೪೭ ದಿನವು ರಾಷ್ಟ್ರಧ್ವಜದ ಹುಟ್ಟುಹಬ್ಬದ ದಿನವಾಗಿದೆ. ಆರಂಭದಲ್ಲಿ ಈ ದಿನವನ್ನು 'ರಾಷ್ಟ್ರಧ್ವಜ ಜನ್ಮದಿನ'ವೆಂದು ಆಚರಿಸಲಾಗುತ್ತಿತ್ತು. ಕ್ರಮೇಣ ಈ ದಿನದ ಬಗೆಗಿನ ಆಸಕ್ತಿ ಕಡಿಮೆ ಕಡಿಮೆಯಾಗುತ್ತಿದ್ದಂತೆಯೇ ಈ ದಿನವು ಜನರ ವಿಸ್ಮರಣೆಗೆ ಹೋಯಿತು. ಆದರೆ ಈ ದಿನದ ಮಹತ್ವವನ್ನು ಬಿಂಬಿಸುವುದಕ್ಕಾಗಿ ಇತ್ತೀಚೆಗೆ ಮತ್ತೆ 'ರಾಷ್ಟ್ರಧ್ವಜದಿನ'ವನ್ನು ಅಲ್ಲಲ್ಲಿ ಆಚರಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಹಲಕೆಲ ಸ್ವಾತಂತ್ರ್ಯಯೋಧರು ಈ ದಿನದಂದು ರಾಷ್ಟ್ರಧ್ವಜವನ್ನು ಹಾರಿಸಿದ್ದಾರೆ.

'ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಸ್' ಎಂಬ ಸರ್ಕಾರದಿಂದ ಸ್ಥಾಪಿತವಾಗಿರುವ ಸಂಸ್ಥೆ ಧ್ವಜದ ನಿರ್ಮಾಣದ ಸಂಹಿತೆಗಳನ್ನು ತೀರ್ಮಾನಿಸುತ್ತದೆ. ರಾಷ್ಟ್ರಧ್ವಜವು ರಾಷ್ಟ್ರದ ಅಸ್ಮಿತೆಯ ಸಂಕೇತವಾಗಿರುವುದರಿಂದ ಅದನ್ನು ತಯಾರಿಸುವ ಬಟ್ಟೆ, ಬಣ್ಣ, ದಾರ ಮುಂತಾದವುಗಳ ಗುಣಮಟ್ಟವನ್ನು ನಿರ್ಧರಿಸುವುದು ಈ ಸಂಸ್ಥೆಯ ಕರ್ತವ್ಯ. ಧ್ವಜವನ್ನು ಹೇಗೆ ಹಾರಿಸಬೇಕು ಹಾಗೂ ಹೇಗೆ ಇಳಿಸಬೇಕೆಂಬುದರ ಬಗ್ಗೆಯೂ ಈ ಸಂಸ್ಥೆ ಕಾನೂನುಗಳನ್ನು ರೂಪಿಸಿದೆ. ಧ್ವಜವನ್ನು ಖಾದಿ ಅರಿವೆಯಲ್ಲಿಯೇ ಮಾಡಬೇಕೆಂಬ ನಿಯಮವಿದೆ. ಧ್ವಜಕ್ಕೆ ಖಾದಿ ಸಿಲ್ಕನ್ನೂ ಉಪಯೋಗಿಸಲಾಗುತ್ತದೆ. ಧ್ವಜದ ಆಕಾರದಲ್ಲಿಯೂ ನಿಯಮಗಳಿವೆ. ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ ಸಂಸ್ಥೆಯು ಒಟ್ಟು ೯ ಆಕಾರದ ಧ್ವಜಗಳನ್ನು ಅನುಮೋದಿಸಿದೆ. ೯೦೬೦ ಘೂಟ ಆಕಾರದ ಧ್ವಜವು ಅತ್ಯಂತ ದೊಡ್ಡ ಧ್ವಜವಾಗಿದ್ದು ಅದನ್ನು ದಿಲ್ಲಿಯ ಕನಾಟ ಪ್ಲೇಸ್‌ದಲ್ಲಿಯ ಸೆಂಟ್ರಲ್ ಪಾರ್ಕ್‌ದಲ್ಲಿ ಹಾರಿಸಲಾಗುತ್ತದೆ. ಈ ಧ್ವಜದ ಹಾರಾಟಕ್ಕೆ ೨೦೬ ಘೂಟು ಎತ್ತರವಿರುವ ಧ್ವಜಸ್ತಂಭವನ್ನು ನಿರ್ಮಿಸಲಾಗಿದೆ.



ಇದಿಷ್ಟು ನಮ್ಮ ದೇಶದ ರಾಷ್ಟ್ರಧ್ವಜದ ವಿಶೇಷತೆ. ನಮ್ಮಲ್ಲಿ ರಾಷ್ಟ್ರದ ಬಗೆಗೆ ಒಂದು ಅವಿಚ್ಛಿನ್ನವಾದ ಪ್ರಜ್ಞೆಯನ್ನು ಬೆಳೆಸುವ ಅದ್ಭುತ ಶಕ್ತಿ ಈ ಧ್ವಜಕ್ಕಿದೆ ಎಂದರೆ ಅತಿಶಯೋಕ್ತಿಯಾಗಲಾರದು.

*   *   *   *

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಸ್ವಾತಂತ್ರ್ಯದ ಚಳವಳಿ ಮತ್ತೆ ಗರಿಗೆದರಲು ಪ್ರಾರಂಭವಾಯಿತು. ಬಾಲಗಂಗಾಧರನಾಥ ತಿಲಕರ ಕಾಲದಲ್ಲಿ ಅವರ ಮತ್ತು ಅವರ ಸಮಕಾಲೀನರ ಪ್ರಯತ್ನದಿಂದ ಸ್ವಾತಂತ್ರ್ಯ ಚಳವಳಿ ಗಟ್ಟಿಗೊಳ್ಳಲು ಪ್ರಾರಂಭವಾಯಿತು. ಗಣೇಶ, ದುರ್ಗೆ, ಶಿವಾಜಿ ಇನ್ನೂ ಮುಂತಾದ ಸಂಕೇತಗಳನ್ನು ಬಳಸಿ ಸ್ವಾತಂತ್ರ್ಯ ಚಳವಳಿಯ ಅನಾವರಣವನ್ನು ಪ್ರಾರಂಭಿಸಿದರು. ಈ ಸಂಕೇತಗಳನ್ನು ಬಳಸಿ ಜನರನ್ನು ಒಗ್ಗೂಡಿಸುವುದೇ ಅವರ ಉದ್ದೇಶವಾಗಿತ್ತು.

ಕರ್ನಾಟಕದಲ್ಲಿ ತಿಲಕ್ ಪಂಥದ ಅನೇಕ ಅನುಯಾಯಿಗಳಿದ್ದರು. ತಿಲಕರ ಕೇಸರಿ ಪತ್ರಿಕೆಯ ಲೇಖನಗಳು ಕನ್ನಡದಲ್ಲಿ ಅನುವಾದಗೊಳ್ಳುತ್ತಿದ್ದವು. ಮುಂಬಯಿ ಕರ್ನಾಟಕ ಪ್ರದೇಶಗಳಲ್ಲಿ ಇವರ ಪ್ರಭಾವ ಹೆಚ್ಚಾಗಿತ್ತು. ಬೆಳಗಾವಿಯ ಗಂಗಾಧರರಾವ್ ದೇಶಪಾಂಡೆ, ಬಿಜಾಪುರದ ಶ್ರೀನಿವಾಸರಾವ್ ಕೌಜಲಗಿ, ಧಾರವಾಡದ ಆಲೂರು ವೆಂಕಟರಾವ್, ಗದಿಗೆಯ್ಯ ಹೊನ್ನಾಪೂರಮಠ, ಹೆಬ್ಬಾಳದ ಅಲಗವಾಡಿ, ಕಾಕಾ ಕಾಲೇಲ್ಕರ್, ಬುರ್ಸೆ, ನರಗುಂದದ ಜಯರಾವ್ ಮುಂತಾದವರು ಆಯಾ ಪ್ರದೇಶದ ಸ್ವಾತಂತ್ರ್ಯ ಹೋರಾಟದ ನೇತಾರರಾಗಿದ್ದರು. ೧೯೦೮ರಲ್ಲಿ ಬ್ರಿಟಿಷರು ತಿಲಕರಿಗೆ ನೀಡಿದ ಆರು ವರ್ಷಗಳ ಕಠಿಣ ಶಿಕ್ಷೆ ಕರ್ನಾಟಕದಲ್ಲೂ ಸ್ವಾತಂತ್ರ್ಯ ಹೋರಾಟಕ್ಕೆ ತೀವ್ರತೆಯನ್ನು ಕೊಟ್ಟಿತು.

೧೯೧೬ರಲ್ಲಿ ಹೋಮ್‌ರೂಲ್ ಲೀಗಿನ ಕರ್ನಾಟಕದ ಶಾಖೆ ಧಾರವಾಡದಲ್ಲಿ ಗಂಗಾಧರರಾವ್ ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತ್ತು. ತಿಲಕರು ಮುಂಬೈ ಕರ್ನಾಟಕದ ಅನೇಕ ಸ್ಥಳಗಳಿಗೆ ಭೇಟಿಯಿತ್ತು ಚಳವಳಿಗಾರರನ್ನುದ್ದೇಶಿಸಿ ಮಾತನಾಡಿದರು. ಇದೇ ವರ್ಷದಲ್ಲಿಯೇ ಬೊಂಬಾಯಿ ಪ್ರಾಂತೀಯ ರಾಜಕೀಯ ಸಮ್ಮೇಳನ ಬೆಳಗಾವಿಯಲ್ಲಿ ನಡೆಯಿತು. ಆಲೂರು ವೆಂಕಟರಾವ್ ಮತ್ತು ಕಡಪ ರಾಘವೇಂದ್ರರಾವ್ ಅವರು ಇದೇ ವರ್ಷವೆ ಧಾರವಾಡದಲ್ಲಿ ಕರ್ನಾಟಕ ಸಭೆ ಪ್ರಾರಂಭಿಸಿದರು. ಹಾಗೆಯೇ ೧೯೧೮ರಲ್ಲಿ

ಬಿಜಾಪುರದಲ್ಲಿ ವಿಠಲಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಮುಂಬಯಿ ಪ್ರಾಂತ್ಯದ ರಾಜಕೀಯ ಸಮ್ಮೇಳನ ನಡೆಯಿತು. ಗಾಂಧೀಜಿಯವರು ಕೂಡ ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಹೀಗೆ ಹೋಂ ರೂಲ್ ಚಳವಳಿಯು ೨೦ನೇ ಶತಮಾನದ ಆರಂಭದಲ್ಲಿ ಕರ್ನಾಟಕದಲ್ಲಿ ವಿಶೇಷವಾಗಿ ಮುಂಬೈ ಕರ್ನಾಟಕದಲ್ಲಿ ರಾಜಕೀಯ ತೀವ್ರತೆಯನ್ನು ತಂದುಕೊಟ್ಟ ಚಳವಳಿಯಾಗಿತ್ತು.

೧೯೧೯ರ ನಂತರ ಗಾಂಧೀಜಿಯವರ ಸತ್ಯಾಗ್ರಹ ಆಂದೋಲನವನ್ನು ಆರಂಭಿಸಿ ಸ್ವಾತಂತ್ರ್ಯ ಹೋರಾಟದ ವಿಧಾನವನ್ನು ಮರು ವ್ಯಾಖ್ಯಾನಿಸುವ ಪ್ರಯತ್ನ ಮಾಡಿದರು. ಗಾಂಧಿಯವರ ಭಾರತ ಸಂಚಾರವು ಪ್ರಜ್ಞಾವಂತ ಯುವಕರನ್ನು ಚುರುಕುಗೊಳಿಸಿತು. ಇವರ ಪ್ರಭಾವದಿಂದ ಅನೇಕ ವಿದ್ಯಾವಂತ ಯುವಕರ ಜೀವನ ಧ್ಯೇಯಗಳು ಮಾರ್ಪಟ್ಟವು. ಹೊಸ ಸಾಮಾಜಿಕ ಸಂವೇದನೆಗಳು ಮಾನವೀಯ ನೆಲೆಯಲ್ಲಿ ಪ್ರಕಟಗೊಳ್ಳಲು ಪ್ರಾರಂಭವಾದ ದಿನಗಳವು. ೧೯೨೦ರ ನಾಗಪುರದ ಕಾಂಗ್ರೆಸ್ ಅಧಿವೇಶನ ಕರ್ನಾಟಕದ ಪಾಲಿಗೆ ಒಂದು ಮುಖ್ಯವಾದ ಚಾರಿತ್ರಿಕ ಘಟನೆ. ಈ ಅಧಿವೇಶನಕ್ಕೆ ಕರ್ನಾಟಕದಿಂದ ಸುಮಾರು ೮೦೦ ಜನ ಪ್ರತಿನಿಧಿಗಳು ಹೋಗಿದ್ದರು. ಈ ಅಧಿವೇಶನದಲ್ಲಿ ಕಾಂಗ್ರೆಸ್ ತಾತ್ವಿಕವಾಗಿ ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ಒಪ್ಪಿ ಕರ್ನಾಟಕಕ್ಕೆ ಪ್ರಾಂತೀಯ ಸ್ಥಾನವನ್ನು ಕೊಟ್ಟಿತು. ಗಂಗಾಧರರಾವ್ ದೇಶಪಾಂಡೆಯವರನ್ನು ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಲಾಯಿತು. ಇದೇ ವರ್ಷದಲ್ಲಿ ಕರ್ನಾಟಕ ಪ್ರಾಂತ್ಯ ರಾಜಕೀಯ ಸಮ್ಮೇಳನ ವಿ. ಪಿ. ಮಾಧವದಾಸರ ಅಧ್ಯಕ್ಷತೆಯಲ್ಲಿ ನಡೆಯಿತು. ಇದರ ಜೊತೆಗೆ ಖಿಲಾಫತ್ ಚಳವಳಿಯಿಂದುಂಟಾದ ಹಿಂದು–ಮುಸ್ಲಿಂ ಐಕ್ಯತೆಯು ಬ್ರಿಟಿಷರ ನಿದ್ದೆಗೆಡಿಸಿತ್ತು.

ಅಸಹಕಾರ ಚಳವಳಿಯ ಕಾವಿನಿಂದ ಶಾಲಾ–ಕಾಲೇಜುಗಳು ಮುಚ್ಚಿದವು. ಅನೇಕ ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು. ಈ ಚಳವಳಿಯ ರೂವಾರಿಗಳಲ್ಲಿ ಹೆಸರಿಸಲೇಬೇಕಾದ ಕೆಲವರೆಂದರೆ ನಾರಾಯಣರಾವ್ ಜೋಶಿ, ಜಯರಾವ್ ದೇಶಪಾಂಡೆ, ಹನುಮಂತರಾವ್ ಕೌಜಲಗಿ, ಕಾರ್ನಾಡ್ ಸದಾಶಿವರಾವ, ಕೆ. ಆರ್. ಕಾರಂತ, ಆಲೂರು ವೆಂಕಟರಾವ್, ದತ್ತೋಪಂತ ಮಜಲಿ, ಕೌಡಲನಿ ದಿವಾನ್ ಸಾಹೇಬ ಜನವೇಕಲ್, ಕೃಷ್ಣರಾವ್ ಕಂಗುಪ್ಪೆ, ವೆಂಕಟೇಶ ಕುಲಕರ್ಣಿ ಮುಂತಾದವರು. ಮದ್ಯದಂಗಡಿ ಹಾಗೂ ವಿದೇಶಿ



ವಸ್ತ್ರಗಳ ಅಂಗಡಿಗಳ ಪಿಕೆಟಿಂಗ್ ನಡೆಯಿತು. ಪರಿಣಾಮವಾಗಿ ಧಾರವಾಡದಲ್ಲಿ ಪೊಲೀಸರು ಅಸಹಕಾರಿಗಳ ಮೇಲೆ ದೌರ್ಜನ್ಯ ನಡೆಸಿದರು. ಅನೇಕರ ಬಂಧನವಾಯಿತು. ದಿವಾಕರ್ ಹುಕ್ಕೇರಿಕರ್, ಚೌಡನಾಯಕ, ತಿಮ್ಮಪ್ಪನಾಯಕ, ಹನುಮಂತರಾವ್ ಮೊಹರೆ ಮುಂತಾದವರನ್ನು ಬಂಧಿಸಲಾಯಿತು. ಪರಮಣ್ಣ ಹೊಸಮನಿ, ವೀರಪ್ಪ ವಾಲಿ, ನೀಲಕಂಠಪ್ಪ ಸುಗಂಧಿ, ಚೆನ್ನಮಲ್ಲಪ್ಪ ಕುರ್ಲೆ, ಡಾ. ಹರ್ಡಿಕರ್ ಮುಂತಾದವರು ಪೂರ್ಣಪ್ರಮಾಣದ ಚಳವಳಿಗಾರರಾದರು. ಖಾದಿಯು ಈ ಕಾಲದಲ್ಲಿ ಜನಪ್ರಿಯತೆ ಗಳಿಸಿತು. ರಾಷ್ಟ್ರೀಯ ಶಾಲೆಗಳು ಅಸ್ತಿತ್ವಕ್ಕೆ ಬಂದವು. ಈ ಚಳವಳಿಯ ಬಿಸಿಯನ್ನು ಸಹಿಸಿಕೊಳ್ಳಲಾಗದೆ ೧೯೨೧ ಜೂನ್ ೩೦ರಂದು ಧಾರವಾಡದಲ್ಲಿ ಸೇಂದಿ ಅಂಗಡಿಯ ಮುಂದೆ ಶಾಂತವಾಗಿ ಪಿಕೆಟಿಂಗ್ ನಡೆಸುತ್ತಿದ್ದ ಸತ್ಯಾಗ್ರಹಿಗಳ ಮೇಲೆ ಗುಂಡುಹಾರಿಸಿ ಪೋಲೀಸರು ಮೂವರನ್ನು ಕೊಂದುಹಾಕಿದರು. ಜೊತೆಗೆ ೨೭ ಇತರ ಜನರ ವಿರುದ್ಧ ದಂಗೆ, ಲೂಟಿ, ಕೊಲೆಯ ಪ್ರಯತ್ನ ಮುಂತಾದ ಆಪಾದನೆಗಳ ಸುಳ್ಳು ಖಟ್ಲೆಗಳನ್ನು ಹಾಕಿದರು. ಇಷ್ಟಾದರೂ ಈ ಚಳವಳಿ ಮುಂದುವರೆಯಿತು. ಪತ್ರಿಕೆಗಳಾದ ಕರ್ಮವೀರ, ನವಶಕ್ತಿ, ಕರ್ಣಾಟಕ ವೈಭವ, ಕರ್ನಾಟಕ ವೃತ್ತ, ರಾಷ್ಟ್ರಬಂಧು, ವಿಶ್ವಕರ್ನಾಟಕ, ಸತ್ಯಾಗ್ರಹಿ ಶರಣ ಸಂದೇಶ ಮುಂತಾದವು ಈ ಚಳವಳಿಗೆ ಬೆಂಬಲವಾಗಿ ಲೇಖನಗಳನ್ನು ಪ್ರಕಟಿಸಿದ್ದರ ಪರಿಣಾಮವಾಗಿ ದಂಡ ತೆರಬೇಕಾಯಿತು. ಈ ಕಾಲದಲ್ಲಿಯೇ ಭೂಗತ ಪತ್ರಿಕೆಗಳು ಹೋರಾಟದ ಪಂಜನ್ನು ಜೋಪಾನವಾಗಿ ಕಾಪಾಡಿದವು. ಆದರೆ ೧೯೨೨ರ ಚೌರಿಚೌರಾದ ಘಟನೆಯ ನಂತರ ರಾಜಕೀಯ ಆಂದೋಲನ ಸ್ವಲ್ಪಕಾಲ ಸ್ಥಗಿತ ಗೊಂಡಿತ್ತು.

* * * *

ಕಾಂಗ್ರೆಸ್ ಸಂಸ್ಥೆ ೧೯೧೯ ರಲ್ಲಿ ಗಾಂಧೀಜಿಯ ನೇತೃತ್ವಕ್ಕೆ ಬಂದು ಅಲ್ಲಿಂದ ಮುಂದೆ "ಭಾರತದಿಂದ ತೊಲಗಿ" ಚಳವಳಿ ಪೂರ್ಣ ಸ್ವಾತಂತ್ರ್ಯ ಹೋರಾಟದ ಎಲ್ಲ ಘಟ್ಟಗಳಲ್ಲಿಯೂ ಕರ್ನಾಟಕ, ಪ್ರಮುಖ ಪಾತ್ರವನ್ನು ವಹಿಸಿತ್ತು. ಸ್ವಾತಂತ್ರ್ಯದ ಆಸೆ, ಅದಕ್ಕಾಗಿ ಹೋರಾಟ, ತ್ಯಾಗ, ಪ್ರಾಣಾರ್ಪಣೆ ಎಲ್ಲರಿಗೂ ಪ್ರಿಯವಾದ ಅದಮ್ಯ ಆಸೆಯೂ ಆತ್ತು. ಕರ್ನಾಟಕದವರು ಎಂದಿನಿಂದಲೂ ಕಲಿಗಳು, ದೊಡ್ಡ ದೊಡ್ಡ ಚಕ್ರಾಧಿಪತ್ಯಗಳನ್ನು ಕಟ್ಟಿ ಆಳಿದರು,

ಸಶಸ್ತ್ರ ಹೋರಾಟದಲ್ಲಿ ಹೇಗೆ ಕರ್ನಾಟಕದವರು ಹಿಂದಾಗಿರಲಿಲ್ಲವೋ ಹಾಗೆಯೇ ಬ್ರಿಟಿಷ್ ಸಾಮ್ರಾಜ್ಯ ಭಾರತದಲ್ಲಿ ದೃಢ ತಳಹದಿಯ ಮೇಲೆ ನಿಂತ ಅನಂತರವೂ, ಅದನ್ನು ಎದುರಿಸುವ ಕಾಂಗ್ರೆಸ್ ಚಳುವಳಿಯಲ್ಲಿಯೂ ಕರ್ನಾಟಕ ಸದಾ ಮುಂಚೂಣಿಯಲ್ಲಿರುತ್ತಿತ್ತು. ೧೮೯೩ ರಲ್ಲಿಯೇ ಕಾಂಗ್ರೆಸ್ ಸಂಸ್ಥಾಪಕ ಎ.ಓ. ಹ್ಯೂಮನ್ ಬೆಳಗಾವಿಗೆ ಬಂದು ಕಾಂಗ್ರೆಸ್ ಧ್ಯೇಯವನ್ನು ಪ್ರಚಾರ ಮಾಡಿದ. ೧೮೯೫, ೧೯೦೩ ಈ ಸಂವತ್ಸರಗಳಲ್ಲಿ ಬೆಳಗಾವಿ ಧಾರವಾಡಗಳಲ್ಲಿ ರಾಜಕೀಯ ಸಮ್ಮೇಳನಗಳು ನಡೆದವು. ೧೮೯೫ ರ ಸಮ್ಮೇಳನದ ಅಧ್ಯಕ್ಷರು ಸರ್ ದಿನ್ ಷಾ ವಾಚಾ, ೧೯೦೩ ರಲ್ಲಿ ಫಿರೋಜ್‌ಶಾ ಮೆಹ್ತಾ ಅಧ್ಯಕ್ಷರಾಗಿದ್ದರು. ತಿಲಕರು ಈ ಸಭೆಗೆ ಬಂದಿದ್ದರು. ಬೆಳಗಾವಿ, ಧಾರವಾಡಗಳಲ್ಲಿ ರಾಜಕೀಯ ಸಮ್ಮೇಳನಗಳು ನಡೆದವು. ವಂಗ ವಿಭಜನೆ ಚಳುವಳಿಯಲ್ಲಿ ಬೆಳಗಾವಿ, ಧಾರವಾಡ, ಅಳ್ನಾವರ, ಗದಗ, ಬಾಗಲಕೋಟೆ, ಕಿತ್ತೂರು ಮುಂತಾದ ಕಡೆಗಳಲ್ಲಿ ಗೋವಿಂದ ರಾವ್ ಯಾಳ್ಗಿ, ಡಾ. ಜೋಶಿ ಇವರ ಮುಖಂಡತ್ವದಲ್ಲಿ ಅನೇಕರು ಹೆಂಡದಂಗಡಿಗಳನ್ನು ಪಿಕೆಟ್ ಮಾಡಿ ಸೆರೆಮನೆ ಸೇರಿದರು. ಲೋಕಮಾನ್ಯ ಬಾಲಗಂಗಾಧರ ತಿಲಕರ ಪ್ರಭಾವ, ಸ್ಫೂರ್ತಿ ಕರ್ನಾಟಕದ ಮೇಲೆ ತುಂಬ ಆಗಿತ್ತು. ಅವರ ಕೇಸರಿ, ಮರಾಠ ಪತ್ರಿಕೆಗಳು ಕರ್ನಾಟಕದಲ್ಲಿ ರಾಷ್ಟ್ರಪ್ರೇಮವನ್ನು ಹರಡಿದವು.

ಕಾಂಗ್ರೆಸಿಗೆ ತಿಲಕರ ಬೆಂಗಲಿಗರಾಗಿ ಆಲೂರು ವೆಂಕಟರಾವ್, ಅಣ್ಣಾಚಾರ್ಯ ಹೊಸಕೇರಿ, ಶ್ರೀನಿವಾಸರಾವ್ ಕೌಜಲಗಿ, ಗೋವಿಂದರಾವ್ ಯಾಳ್ಗಿ, ಗಂಗಾಧರರಾವ್ ದೇಶಪಾಂಡೆ ಇವರೆಲ್ಲ ಹೋಗಿದ್ದರು. ತಿಲಕರು ಕರ್ನಾಟಕಕ್ಕೆ ಪದೇ ಪದೇ ಭೇಟಿ ಕೊಡುತ್ತಿದ್ದರು. ೧೯೦೬ರಲ್ಲಿ ಬೆಳಗಾವಿ, ಬಳ್ಳಾರಿ, ಗುರ್ಲ ಹೊಸೂರುಗಳಿಗೆ ಬಂದಿದ್ದರು. ಆಗಲೇ ಅವರು ಬೆಳಗಾವಿ ಕರ್ನಾಟಕಕ್ಕೆ ಸೇರಿದ್ದು ಎಂದು ಹೇಳಿದ್ದರು. ಹೋಮ್ ರೂಲ್ ಲೀಗಿನ ಸಂದರ್ಭದಲ್ಲಿ ಸಹ ತಿಲಕರು ೧೯೧೬ರಲ್ಲಿ ಬೆಳಗಾವಿ, ಸಂಕೇಶ್ವರ, ಸಿರಸಿ, ಸಿದ್ಧಾಪುರ, ಬಳ್ಳಾರಿ, ಹುಬ್ಬಳ್ಳಿ, ಮಂಗಳೂರು ಇಲ್ಲೆಲ್ಲ ಸಂಚರಿಸಿ ಹೋಮ್‌ರೂಲ್‌ಗೆ ಶಾಖೆಗಳನ್ನು ತೆರೆದರು. ಹದಿನಾರನೇ ಬೊಂಬಾಯಿ ಪ್ರಾಂತ ರಾಜಕೀಯ ಸಮ್ಮೇಳನ ೧೯೧೬ ರಲ್ಲಿ ಬೆಳಗಾವಿಯಲ್ಲಿ ನಡೆಯಿತು. ಹದಿನೆಂಟನೆ ಸಮ್ಮೇಳನ ಬಿಜಾಪುರದಲ್ಲಿ ನಡೆಯಿತು. ಈ ಎರಡು ಸಭೆಗಳಿಗೂ ಗಾಂಧೀಜಿ ಬಂದಿದ್ದರು. ನೇರವಾಗಿ ಹೋರಾಟವನ್ನು ಪ್ರಾರಂಭಿಸುವುದು ಕಾಂಗ್ರೆಸ್ಸಿನ ಉದ್ದೇಶವಾಗಿರಲಿಲ್ಲ.



ಕಾಂಗ್ರೆಸಿನ ರಚನಾತ್ಮಕ ಕಾರ್ಯಗಳು ಮೈಸೂರು ಸಂಸ್ಥಾನದಲ್ಲಿ ನಡೆಯುತ್ತಿದ್ದವು. ಇಂಥ ಸಂದರ್ಭದಲ್ಲಿ ಧಾರವಾಡದ ಹಿರಿಯರು ಕಾಂಗ್ರೆಸ್ ಮೂಲಕ ಚಳುವಳಿಯನ್ನು ತೀವ್ರಗೊಳಿಸುವ ಪ್ರಯತ್ನ ಮಾಡುತ್ತಿದ್ದರು.

* * * *

ಕ್ರಿ. ಶ. ೧೮೫೭ರ ಸಿಪಾಯಿ ದಂಗೆಯ ನಂತರ, ಭಾರತದಲ್ಲಿ ದೊಡ್ಡ ಪ್ರಮಾಣದ ಹೋರಾಟವನ್ನು ಮುನ್ನಡೆಸಿದವರು ಲೋಕಮಾನ್ಯ ಬಾಲಗಂಗಾಧರ ತಿಲಕರು. ಭಾರತದ ಜನತೆಯ ಜಾಗೃತಿಯನ್ನು ಕೈಕೊಂಡು ಭಾರತ ಮಾತೆಯ ದಾಸ್ಯ ಶೃಂಖಲೆಗಳನ್ನು ಕಿತ್ತೆಸೆಯಲು ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನುಗ್ಗಿ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿದರು.

ಲೋಕಮಾನ್ಯ ತಿಲಕರು ಕರ್ನಾಟಕದೊಂದಿಗೆ ಆತ್ಮೀಯ ಒಡನಾಟ ಇಟ್ಟುಕೊಂಡಿದ್ದರು. ಅವರು ಬೆಳಗಾವಿಗೆ ಮೇಲಿಂದ ಮೇಲೆ ಬಂದು ಹೋಗುತ್ತಿದ್ದರು. ಹುಬ್ಬಳ್ಳಿಯಲ್ಲಿ ಸಿದ್ಧಾರೂಢರನ್ನು, ಅಥಣಿ ಮುರುಘೇಂದ್ರ ಶಿವಯೋಗಿಗಳನ್ನು ಭೇಟಿ ಮಾಡಿದ್ದರು. ನಮ್ಮ ದೇಶ ಯಾವಾಗ ಮುಕ್ತವಾಗುವುದು ಎಂದು ಈ ಮಹಾತ್ಮರನ್ನು ಕೇಳಿದ್ದರು. ಆಗ ಅಥಣಿ ಶಿವಯೋಗಿಗಳು– "ಭಾರತಕ್ಕೆ ಸ್ವಾತಂತ್ರ್ಯ ದೊರೆಯುತ್ತದೆ, ಆದರೆ ಈ ಫಲವನ್ನು ನಾವು ಅನುಭವಿಸುವುದಿಲ್ಲ. ಅದರ ಫಲ ನಮ್ಮ ಮುಂದಿನ ಪೀಳಿಗೆಗೆ ದೊರೆಯುತ್ತದೆ" ಎಂದು ಹೇಳಿದ್ದರು.

ಲೋಕಮಾನ್ಯರ ಪ್ರಭಾವದಿಂದ ಕರ್ನಾಟಕದಲ್ಲಿ ಗಂಗಾಧರರಾವ ದೇಶಪಾಂಡೆ, ಶ್ರೀನಿವಾಸ ಕೌಜಲಗಿ, ವೆಂಕಟರಾವ್ ಹುಯಿಲಗೋಳ, ಶ್ರೀನಿವಾಸರಾವ್ ಉಮಚಗಿ, ಅಂತರಾವ್ ಜಾಲಿಹಾಳ, ಕಡಪಾ ರಾಘವೇಂದ್ರ ರಾವ್, ಆಲೂರ ವೆಂಕಟರಾವ್, ಗದಿಗೆಯ್ಯ ಹೊನ್ನಾಪುರಮಠ, ಸಂಗನಗೌಡ ಪಾಟೀಲ ಅಬ್ಬಿಗೇರಿ ಮೊದಲಾದವರು ಹೋರಾಟಕ್ಕೆ ಮುಂದಾದರು.

ಸ್ವಾತಂತ್ರ್ಯದ ಕಿಚ್ಚನ್ನು ಜನರಲ್ಲುಂಟು ಮಾಡುವುದಕ್ಕಾಗಿ ಇವರೆಲ್ಲ ತಮ್ಮ ಭಾಷಣ ಮತ್ತು ಹರಿತವಾದ ಲೇಖನಗಳ ಮೂಲಕ ಪ್ರತ್ಯಕ್ಷವಾಗಿಯೇ ಚಟುವಟಿಕೆಯಲ್ಲಿ ಭಾಗವಹಿಸಿದ್ದರು. ೧೯೦೫ರಲ್ಲಿ ಬಂಗಾಲದ ವಿಭಜನೆ

ಮಾಡಿದಾಗ, ಅದನ್ನು ವಿರೋಧಿಸಿ ಧಾರವಾಡದಲ್ಲಿ ಗದಿಗೆಯ್ಯ ಹೊನ್ನಾಪುರ ಮಠರು ಉಲನ್ ಫಾರ್ಸಿ ಕೋರ್ಟ್ ತ್ಯಜಿಸಿ, ಅಂದಿನಿಂದ ಅಪ್ಪಟ ಖಾದಿ ಧಾರಿಗಳಾದರು.

The Karnataka leaders were inspired by Tilak's goal of swadeshi. The people then were greatly infatuated with the use of foreign goods. Alur Venkatrao, Krishnarao Mudavedakar, Gadigeyya Honnapurmath, Vithalarao Joshi, Dattopant Kale, Narasimhachar Punekar, Navaleppa Muttur(Kittur) etc; Started effective campaign of bycotting the foreign goods and gave an impetus for the various articles of swadeshi and expressing their sympathy for the Bengalis (Growth of Nationalism in Karnataka-1857 to 1921 Ph.D. Thesis P. 155, 156, By Prof. N. A. Patil)

ಕ್ರಿ. ಶ. ೧೯೧೪ರಿಂದ ೧೯೧೮ರ ವರೆಗೆ ನಡೆದ ಜಾಗತಿಕ ಮಹಾ ಯುದ್ಧದಲ್ಲಿ ಮಹಾತ್ಮ ಗಾಂಧೀಜಿಯವರು ಬ್ರಿಟಿಷ್ ಸರಕಾರದ ಪೊಳ್ಳು ಭರವಸೆಗಳನ್ನು ನಂಬಿ ಎಲ್ಲಂದದ ಸಹಕಾರವನ್ನು ಅವರಿಗೆ ನೀಡಿದರು. ಆದರೆ ಆ ಸಾಮ್ರಾಜ್ಯ ತಾನು ಮಾತುಕೊಟ್ಟಂತೆ ನಡೆದುಕೊಳ್ಳಲಿಲ್ಲ. ಆಗ ತಾವು ಮೋಸ ಹೋದುದನ್ನು ಅರಿತ ಮಹಾತ್ಮ ಗಾಂಧೀಜಿಯವರ ನಾಯಕತ್ವದ ಕಾಂಗ್ರೆಸ್ಸು ಆ ಸಾಮ್ರಾಜ್ಯದ ವಿರುದ್ಧ ಕ್ರಿ.ಶ. ೧೯೨೧ರಲ್ಲಿ ಅಸಹಕಾರವನ್ನು ಘೋಷಿಸಿತು. ಇಷ್ಟೊತ್ತಿಗಾಗಲೇ ಗಾಂಧೀಜಿಯವರು ಈ ಹೋರಾಟದ ನೇತೃತ್ವವನ್ನು ವಹಿಸಿಕೊಂಡಿದ್ದರು. ಇದೇ ವರ್ಷ (೧೯೨೧) ಲೋಕಮಾನ್ಯ ಬಾಲಗಂಗಾಧರ ತಿಲಕರು ನಿಧನರಾದರು. ಹೀಗಾಗಿ ಈ ಹೋರಾಟದ ಸಂಪೂರ್ಣ ಜವಾಬ್ದಾರಿ ಗಾಂಧೀಜಿಯವರ ಮೇಲೆ ಬಿದ್ದಿತು.

ಗಾಂಧೀಜಿಯವರು ಪ್ರಾರಂಭಿಸಿದ ಈ ಅಸಹಕಾರ ಆಂದೋಲನ ಪ್ರಾರಂಭವಾದೊಡನೆ ಇಡೀ ದೇಶದ ಜನರೆಲ್ಲರೂ ಅದರಲ್ಲಿ ಮುಕ್ತಮನದಿಂದ ಪಾಲುಗೊಂಡರು. ಧಾರವಾಡದಲ್ಲಿ ಬಹುತೇಕ ವಕೀಲರು ತಮ್ಮ ವೃತ್ತಿಗೆ ತಿಲಾಂಜಲಿಯಿತ್ತು ರಾಷ್ಟ್ರದ ಸ್ವಾತಂತ್ರ್ಯ ಸಮರದಲ್ಲಿ ತಮ್ಮ ಅಚಲವಾದ ನಿಷ್ಠೆಯನ್ನು ತೋರಿಸಿದರು.



೧೯ನೇ ಶತಮಾನದ ಕೊನೆಯ ಎರಡು ದಶಕಗಳಲ್ಲಿ ಹಾಗೂ ೨೦ನೇ ಶತಮಾನದ ಪ್ರಾರಂಭದ ಮೂರು ದಶಕಗಳಲ್ಲಿ, ಮಹಾರಾಷ್ಟ್ರದಲ್ಲಿ ಮತ್ತು ಮಹಾರಾಷ್ಟ್ರದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ ಉತ್ತರ ಕರ್ನಾಟಕದ ಬೆಳಗಾವಿ, ವಿಜಯಪುರ, ಧಾರವಾಡ ಜಿಲ್ಲೆಗಳಲ್ಲಿ (ಈ ಜಿಲ್ಲೆಗಳ ಪ್ರದೇಶವನ್ನು ಮುಂಬೈ ಕರ್ನಾಟಕವೆಂದು ಕರೆಯಲಾಗುತ್ತಿತ್ತು. ಇತ್ತೀಚೆಗೆ ಸರಕಾರ ಈ ಪ್ರದೇಶವನ್ನು ಕಿತ್ತೂರು ಕರ್ನಾಟಕವೆಂದು ಘೋಷಣೆ ಮಾಡಿದೆ) ಬ್ರಾಹ್ಮಣೇತರ ಚಳುವಳಿ ಹುರುಪಿನಿಂದ ನಡೆದಿತ್ತು.

ಸಮಸ್ತ ಭಾರತವನ್ನು ಆಂಗ್ಲರು ತಮ್ಮ ಆಡಳಿತದ ಸುಪರ್ದಿಗೆ ತಗೆದುಕೊಂಡು ಆಡಳಿತಾತ್ಮಕ ಅಧಿಕಾರ ನಡೆಸುತ್ತಿದ್ದ ಸಂದರ್ಭದಲ್ಲಿ ಭಾರತದಲ್ಲಿ ಬ್ರಿಟಿಷರ ವಿರುದ್ಧ ಹೋರಾಡುವವರ ಒಂದು ವರ್ಗವಾದರೆ; ಇಲ್ಲಿಯ ಪುರೋಹಿತಶಾಹಿ ವರ್ಗದ ವಿರುದ್ಧ ಹೋರಾಡುವವರ ವರ್ಗ ಇನ್ನೊಂದು. ಅದು ಬ್ರಾಹ್ಮಣೇತರ ಚಳುವಳಿಯನ್ನು ಹುಟ್ಟು ಹಾಕುವ ಮೂಲಕ ದೇಶದಲ್ಲಿ ಸಾವಿರಾರು ವರ್ಷಗಳಿಂದ ನಡೆದು ಬಂದಿದ್ದ ಶೋಷಣೆಯನ್ನು ತೊಡೆದು ಹಾಕಲು ಪ್ರಯತ್ನಿಸುತ್ತಿತ್ತು. ಇದು ಕೂಡ ಗಾಂಧೀಜಿಯವರ ತತ್ವವೇ ಆಗಿದೆ. ಉತ್ತರ ಕರ್ನಾಟಕದ ಬ್ರಾಹ್ಮಣೇತರ ಚಳುವಳಿಯ ನೇತೃತ್ವ ವಹಿಸಿದವರು ಸರ್ ಸಿದ್ದಪ್ಪ ಕಂಬಳಿ, ಗದಿಗೆಯ್ಯ ಹೊನ್ನಾಪೂರಮಠ, ಸಿ. ಸಿ. ಹುಲಕೋಟಿ, ರಾವಬಹದ್ದೂರ ಬಿ. ಎಲ್. ಪಾಟೀಲ, ಸಿದ್ದಪ್ಪ ಹೊಸಮನಿ, ಎಫ್. ಟಿ. ನಲವಡಿ, ಟಿ. ಟಿ. ಮುದರಡ್ಡಿ ಮತ್ತು ಕೊಲ್ಲಾಪುರದ ಶಾಹು ಮಹಾರಾಜರು.

೧೯೨೪ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ೩೯ನೆಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಜರುಗಿತು. ಇದೇ ಸಂದರ್ಭದಲ್ಲಿ ಬೆಳಗಾವಿ ಬೇರೆ ಬೇರೆ ೨೩ ಅಧಿವೇಶನಗಳು ಜರುಗಿದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಬ್ರಾಹ್ಮಣೇತರ ಚಳುವಳಿ ಪರಿಷತ್ತು ಮತ್ತು ಕರ್ನಾಟಕ ಏಕೀಕರಣ ಪರಿಷತ್ತು. ಈ ಎರಡೂ ಅಧಿವೇಶನಗಳು ಸರ್ ಸಿದ್ಧಪ್ಪ ಕಂಬಳಿ ಅವರ ನೇತೃತ್ವದಲ್ಲಿ ಜರುಗಿದವು.

ಬ್ರಾಹ್ಮಣೇತರ ಪರಿಷತ್ತು ಕಾಂಗ್ರೆಸ್‌ನ ಪ್ರಭಾವವನ್ನು ಅಳಿಸಿ ಹಾಕಬೇಕೆಂದು ಉದ್ದೇಶಿಸಿ ಆಂದೋಲನ ಕೈಕೊಂಡಿತ್ತು. ಬೆಳಗಾವಿ ಕಾಂಗ್ರೆಸ್ ಅಧಿವೇಶನ ಕಾಲಕ್ಕೆ ಪರ್ಯಾಯವಾಗಿ ಈ ಸಮಾವೇಶವನ್ನು ದಿವಾನ್ ಬಹದ್ದೂರ ಲಕ್ಕೆ,

ಎಸ್. ಎಂ. ಭೋಜ, ಷಣ್ಮುಖಪ್ಪ ಅಂಗಡಿ, ಎಂ. ಆರ್. ಸಾಖರೆ ಮೊದಲಾದವರು ಆಯೋಜಿಸಿದ್ದರು. ಕರ್ನಾಟಕ ಮತ್ತು ಹೊರರಾಜ್ಯಗಳಿಂದಲೂ ಈ ಸಮಾವೇಶಕ್ಕೆ ಜನ ಆಗಮಿಸಿದ್ದರು. ಈ ಬ್ರಾಹ್ಮಣೇತರ ಅಧಿವೇಶನದ ಸರ್ವಾಧ್ಯಕ್ಷರಾದವರು ರಾಮಸ್ವಾಮಿ ಮುದಲಿಯಾರ್ ಅವರು. ಆಗ ಜನಸಾಮಾನ್ಯರಿಗೆ ಕಾಂಗ್ರೆಸ್ ಬಗ್ಗೆ ಎಷ್ಟು ಉತ್ಸಾಹವಿತ್ತೋ ಅಷ್ಟೇ ಉತ್ಸಾಹ ಬ್ರಾಹ್ಮಣೇತರ ಅಧಿವೇಶನದ ಬಗ್ಗೆಯೂ ಇತ್ತು ಎಂಬುದು ಗಮನಾರ್ಹವಾದ ಅಂಶ. ಆಗ ಜನಸಾಮಾನ್ಯರು ಕೂಡ ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ವಲಯಗಳಲ್ಲಿನ್ನೂ ಬ್ರಾಹ್ಮಣರ ಪ್ರಭುತ್ವವನ್ನು ಮನಗಂಡಿದ್ದರು. ಈ ಬ್ರಾಹ್ಮಣೇತರ ನಾಯಕರುಗಳು ತಮ್ಮ ಭಾಷಣಗಳಲ್ಲಿ ತಮ್ಮ ಪರಿಶ್ರಮದ ಮುಖ್ಯ ಉದ್ದೇಶವು ಬ್ರಾಹ್ಮಣ ಸಮುದಾಯದಂತೆ ಜನರನ್ನು ಸಾಮಾಜಿಕವಾಗಿ, ರಾಜಕೀಯವಾಗಿ ಅದರಲ್ಲೂ ಶೈಕ್ಷಣಿಕವಾಗಿ ಉನ್ನತೀಕರಿಸುವುದೇ ಆಗಿದೆ ಎಂದು ಉದ್ವೇಗದಿಂದ ಹೇಳಿದಾಗಲೆಲ್ಲ ಜನರು ಚಪ್ಪಾಳೆ ಮತ್ತು ಚೀತ್ಕಾರದ ಮೂಲಕ ಬೆಂಬಲಿಸುತ್ತಿದ್ದರು. ಇದು ನಾಯಕರುಗಳ ಮಾತುಗಳು ಮನಮುಟ್ಟುತ್ತಿವೆ ಎಂಬುದರ ಸೂಚಕವಾಗಿದ್ದವು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹಳ್ಳಿಗರಲ್ಲಿ, ನಗರದ ಜನರಲ್ಲಿ ಕರುಣೆ, ಅನುಕಂಪ ಹುಟ್ಟು ಹಾಕುವುದೇ ಮುಖ್ಯ ಉದ್ದೇಶವಾಗಿತ್ತು. ಎಲ್ಲೆಡೆ ಬಡತನವು ಮನೆ ಮಾತಾಗಿತ್ತು. ಈಗಲೂ ಕೂಡ ಹಳ್ಳಿಗಳಲ್ಲಿ ಬಡತನ ಹೇಳಿಕೊಳ್ಳುವ ಮಟ್ಟಿಗೆ ಕಡಿಮೆಯಾಗಿಲ್ಲ. ಶ್ರೀ ರಾಮಸ್ವಾಮಿ ಮೊದಲಿಯಾರ್‌ರವರು ಪ್ರಸಿದ್ಧ ಪಂಡಿತರೂ ವಿದ್ವತ್ಪೂರ್ಣ ಭಾಷಣಕಾರರೂ ಆಗಿದ್ದರಲ್ಲದೆ ವಯಸ್ಸಾಗಿದ್ದರೂ ಕ್ರಿಯಾಶೀಲರಾಗಿದ್ದರು. ಅವರು ಬ್ರಿಟಿಷ್ ಸರ್ಕಾರದ ಪ್ರಮುಖ ಸಮಿತಿಗಳಲ್ಲಿ ಕೆಲಸ ಮಾಡುತ್ತಿದ್ದರು. ಸಮ್ಮೇಳನದಲ್ಲಿ ಅವರು ಆರ್ಥಿಕ, ರಾಜಕೀಯ ಮತ್ತು ಇತರೇ ಸ್ಥಿತಿಗತಿಗಳ ಅಭಿವೃದ್ಧಿಗೋಸ್ಕರ ನಾಯಕರ ಹಿಂದೆ ಟೊಂಕಕಟ್ಟಿ ನಿಲ್ಲಬೇಕೆಂದು ಜನರಿಗೆ ಸಲಹೆ ನೀಡಿದರು. ಈ ಸಮ್ಮೇಳನದ ಪ್ರಮುಖ ಕೆಲಸವು ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯಗಳ ಅದರಲ್ಲೂ ಶೋಷಣೆಗೆ ಒಳಗಾಗಿರುವ ಹರಿಜನರ ಅಂತರ್ಯದಲ್ಲಿ ಹುದುಗಿರುವ ಭಾವನೆಗಳನ್ನು ಕಲಕುವುದು ಮತ್ತು ಆಂಗ್ಲ ಸರಕಾರವನ್ನು ನ್ಯಾಯೋಚಿತ ನಡೆಗಾಗಿ ಪ್ರಾರ್ಥಿಸುವುದು ಆಗಿತ್ತು. ಹಿಂದುಳಿದ ವರ್ಗಗಳ ಸುಶಿಕ್ಷಿತ ಯುವಕರಿಗೆ ಉದ್ಯೋಗದ ಅನುಕೂಲತೆಗಳನ್ನು ಒದಗಿಸಬಹುದೆಂಬ ಉದ್ದೇಶವು ಇತ್ತು.



ರಾಷ್ಟ್ರೀಯ ಆಂದೋಲನ ಆರಂಭವಾದಾಗ ಮೊಟ್ಟಮೊದಲು ಅದರಲ್ಲಿ ಧುಮುಕಿದವರು ಹೆಚ್ಚಾಗಿ ಬ್ರಾಹ್ಮಣರು. ಈ ಮಾತು ಕರ್ನಾಟಕಕ್ಕಂತೂ ಬಹು ಹೆಚ್ಚಾಗಿ ಅನ್ವಯಿಸುತ್ತದೆ. ಶಿಕ್ಷಣದಲ್ಲಿ ಬ್ರಾಹ್ಮಣರು ಮಾತ್ರ ಬಹಳಷ್ಟು ಮುಂದುವರೆದವರೂ ರಾಜಕೀಯ ದೂರದೃಷ್ಟಿಯುಳ್ಳವರೂ ಆದುದರಿಂದ ಅದು ಸ್ವಾಭಾವಿಕವೂ ಆಗಿತ್ತು. ರಾಷ್ಟ್ರೀಯ ಹೋರಾಟದಲ್ಲಿ ಎಲ್ಲೆಲ್ಲೂ ಬ್ರಾಹ್ಮಣರನ್ನೇ ಕಂಡ ಇತರರು ಅದೊಂದು ಬ್ರಾಹ್ಮಣರ ಚಳುವಳಿ, ನೂರಕ್ಕೆ ನೂರರಷ್ಟು ಸುಶಿಕ್ಷಿತರೂ ಸರಕಾರಿ ಉದ್ಯೋಗ, ನೌಕರಿ ಚಾಕರಿಗಳಲ್ಲಿ ಪಾಲುಗೊಂಡವರೂ ಆದ ಅವರು ಸರಕಾರದ ಆಡಳಿತದ ವಿರುದ್ಧವಾಗಿಯೂ ಅವರು ನೀಡುತ್ತಿದ್ದ ಭಾಷಣ ಹಾಗೂ ನೌಕರಿಗಳ ವಿರುದ್ಧ ಮಾತಾಡುತ್ತಿರುವುದರಲ್ಲಿ ಏನೋ ಒಂದು ಕುತಂತ್ರವಿರಬೇಕೆಂದು ಸಂಶಯಗ್ರಸ್ತರಾಗಿದ್ದರು. ಆಗಿನ ರಾಷ್ಟ್ರೀಯ ಆಂದೋಲನವು ಬ್ರಾಹ್ಮಣರ ಚಳುವಳಿಯೆಂಬ ಗ್ರಹಿಕೆಯು ಬ್ರಾಹ್ಮಣೇತರರಲ್ಲಿ ಇತ್ತು.

ಹುಬ್ಬಳ್ಳಿಯಲ್ಲಿ ೧೯೨೩ರಲ್ಲಿ ಕರ್ನಾಟಕ ಬ್ರಾಹ್ಮಣೇತರ ಪರಿಷತ್ತು ಜರುಗಿತು. ಅದಕ್ಕೆ ಮದ್ರಾಸಿನಿಂದ ತ್ಯಾಗರಾಜ ಚೆಟ್ಟಿಯವರೂ, ಕೊಲ್ಲಾಪುರ ಶಾಹು ಮಹಾರಾಜರು ಆಗಮಿಸಿದ್ದರು. ಬ್ರಾಹ್ಮಣೇತರ ಸಮಾಜಗಳ ಮುಖಂಡರೂ ವಿದ್ಯಾವಂತರೂ ಸೇರಿದ್ದರು. ಅದು ಬಹುದೊಡ್ಡ ಪ್ರಮಾಣದಲ್ಲಿ ಗಾತ್ರದಲ್ಲೂ, ಸಹ ನಡೆಯಿತು. ಅದರ ಅಂಗವಾಗಿ ಬ್ರಾಹ್ಮಣೇತರ ರಾಜಕೀಯ ಪರಿಷತ್ತು, ಶೈಕ್ಷಣಿಕ ಪರಿಷತ್ತು, ಸಾಮಾಜಿಕ ಪರಿಷತ್ತು ನಡೆದವು. ಈ ಪರಿಷತ್ತಿನಲ್ಲಿ ಅನೇಕ ಲಿಂಗಾಯತ ಮುಖಂಡರೂ ಭಾಗವಹಿಸಿದರು. ಅವರಲ್ಲಿ ಗದಿಗೆಯ್ಯ ಹೊನ್ನಾಪೂರಮಠ, ಸಿದ್ದಪ್ಪ ಕಂಬಳಿ ಮೊದಲಾದವರು ಮುಖ್ಯರು. ಗದಿಗೆಯ್ಯ ಹೊನ್ನಾಪೂರಮಠರು ಕಾಂಗ್ರೆಸ್ ಚಟುವಟಿಕೆಗಳಲ್ಲಿಯೂ ಭಾಗವಹಿಸುತ್ತಿದ್ದರು. ಲೋಕಮಾನ್ಯರ ಕಾಲದಿಂದಲೂ ಅವರು ಕಾಂಗ್ರೆಸ್‌ನಲ್ಲಿದ್ದರು. ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕವೂ ದೇಶಾಭಿಮಾನದ ಕಾರ್ಯಗಳನ್ನು ಮಾಡುತ್ತಿದ್ದರು. ೩೯ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವನ್ನು ಧಾರವಾಡದಲ್ಲಿ ಜರುಗಿಸಬೇಕೆಂದು ತುಂಬ ಪ್ರಯತ್ನಪಟ್ಟರು. ಆದರೆ ಗಂಗಾಧರರಾವ್ ದೇಶಪಾಂಡೆಯವರು ಕಾಂಗ್ರೆಸ್ ಕಾರ್ಯದರ್ಶಿಗಳಾದ ಕಾರಣ, ಒತ್ತಡ ಹಾಕಿ ಬೆಳಗಾವಿಯಲ್ಲಿ ಅಧಿವೇಶನ ನಡೆಯುವಂತೆ ಮಾಡಿದರು.

* * * *

"ಭಾರತೀಯ ರಾಷ್ಟ್ರೀಯ ಆಂದೋಲನ ಅಥವಾ ದೇಶದಲ್ಲಿ ರಾಜಕೀಯ ಜಾಗೃತಿ ವೃದ್ಧಿಸಲು ಕಾರಣವಾದ ಚಳವಳಿಯ ಒಂದು ವಿಶೇಷ ಲಕ್ಷಣವೆಂದರೆ, ಪ್ರತಿಯೊಬ್ಬ ರಾಷ್ಟ್ರೀಯವಾದಿ ನೇತಾರನೂ ಪತ್ರಿಕಾರಂಗದ ಜೊತೆಯಲ್ಲಿ ಹೊಂದಿರುವ ಗಾಢವಾದ ನಂಟು. ರಾಮಮೋಹನ ರಾಯ್ ಅವರು 'ಸಂಬಾದ ಕೌಮುದಿ' ಸಂಪಾದಿಸಿದ್ದರೆ, ಹೆನ್ರಿ ಡಿರೋಝಿಯೊ ಅವರು 'ದ ಕೆಲಿಡೊಸ್ಕೋಪ್', ದ್ವಾರಕಾನಾಥ ಟಾಗೋರ್ ಅವರು 'ದ ರಿಫಾರ್ಮರ್', ಬಾಲಶಾಸ್ತ್ರೀ ಜಾಂಬೇಕರ ಅವರು 'ದ ಬಾಂಬೆ ದರ್ಪಣ್', ಬಾಲಗಂಗಾಧರ ತಿಲಕ ಅವರು 'ಕೇಸರಿ', ಮದನಮೋಹನ ಮಾಲವೀಯ ಅವರು 'ಅಭ್ಯುದಯ' ಮತ್ತು ಆ್ಯನಿ ಬೆಸೆಂಟ್ ಅವರು 'ನ್ಯೂ ಇಂಡಿಯ' ಪತ್ರಿಕೆಗಳನ್ನು ಸಂಪಾದಿಸಿದ್ದರು. ಅದೇ ರೀತಿ ಸರ್ ಸೈಯದ್ ಅಹಮದ್ ಖಾನ್, ಗೋಪಾಲಕೃಷ್ಣ ಗೋಖಲೆ, ಸಿ. ವೈ. ಚಿಂತಾಮಣಿ, ಮೌಲಾನಾ ಆಝಾದ್, ಮೋತಿಲಾಲ ನೆಹರು, ಮಹಾತ್ಮಾ ಗಾಂಧಿ, ಜವಹರಲಾಲ ನೆಹರು ಇವರೆಲ್ಲರೂ ಬೇರೆ, ಬೇರೆ ಕಾಲಘಟ್ಟಗಳಲ್ಲಿ ಬೇರೆ, ಬೇರೆ ಪತ್ರಿಕೆಗಳನ್ನು ಸಂಪಾದಿಸಿದ್ದರು. ಆದರೆ, ಈ ಎಲ್ಲ ನಾಯಕರುಗಳು ಪತ್ರಿಕಾ ಕ್ಷೇತ್ರದಲ್ಲಿ ಅಥವಾ ಪತ್ರಕರ್ತರಾಗಿ ನಿರ್ವಹಿಸಿದ ಪಾತ್ರದ ಕುರಿತಾಗಿ ಸರಿಯಾದ ಮೌಲ್ಯಾಂಕನ ಇನ್ನೂ ಆಗದಿರುವುದು ದುರದೃಷ್ಟಕರ". (Historical Studies on Modern India, Ed: B. M. Sankdher, P. 134).

"೧೯ನೇ ಶತಮಾನದ ಕೊನೆಯ ಭಾಗದಲ್ಲಿ ಧಾರವಾಡಕ್ಕೆ ಮಹಾರಾಷ್ಟ್ರದ ಕೂಡ ನಿಕಟವಾದ ಸಂಪರ್ಕ ಬಂದಿತ್ತು. ಅನೇಕ ಇತಿಹಾಸಿಕ ಮತ್ತು ಭೌಗೋಲಿಕ ಕಾರಣಗಳ ಮೂಲಕ ಪುಣೆ ಮತ್ತು ಮುಂಬಯಿ ಭಾರತದ ಜೀವನಾಡಿಗಳಲ್ಲಿ ಒಂದಾದವು. ಅದರ ಪರಿಣಾಮ–ಪ್ರಭಾವ ಧಾರವಾಡದ ಮೇಲೆ ಸ್ವಾಭಾವಿಕವಾಗಿಯೇ ಆಗುತ್ತಿತ್ತು. ಪುಣೆಯಲ್ಲಿ ಮಳೆಯಾದರೆ ಧಾರವಾಡದಲ್ಲಿ ಸೀನುತ್ತಾರೆ– ಎಂಬ ಮಾತು ಸ್ವಲ್ಪ ಅತಿಶಯೋಕ್ತಿಯಿಂದ ಕೂಡಿದುದಾದರೂ, ಸತ್ಯಕ್ಕೆ ಬಹಳ ದೂರವಾದುದೇನೂ ಅಲ್ಲ. ಇದಕ್ಕೆ ಬಹು ಮುಖ್ಯ ಕಾರಣವೆಂದರೆ ದಿವಂಗತ ಲೋಕಮಾನ್ಯ ಟಿಳಕರ ವ್ಯಕ್ತಿತ್ವದ ಪ್ರಭಾವಲಯ. ಅವರಿಗೆ ಮಹಾರಾಷ್ಟ್ರದಷ್ಟೇ ಕರ್ನಾಟಕವೂ ಪ್ರಿಯವಾಗಿದ್ದಿತು. ಅಂತಲೇ, ಕರ್ನಾಟಕದಲ್ಲಿ ಟಿಳಕರ ಅನುಯಾಯಿಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿದ್ದರು.

ಹೀಗಾಗಿ, ಪುಣೆಯಲ್ಲಿ ಯಾವ ಚಳವಳಿ ಪ್ರಾರಂಭವಾದರೂ ಅದರ ಪರಿಣಾಮ ಧಾರವಾಡದಲ್ಲಿ ಆಗದೆ ಹೋಗುತ್ತಿರಲಿಲ್ಲ. ಪುಣೆಯಲ್ಲಿ ೧೮೮೧ರ



ಸುಮಾರಿಗೆ ಕೈ. ವಾ. ಚಿಪಳೂಣಕರ ಶಾಸ್ತ್ರಿಗಳು 'ನ್ಯೂ ಇಂಗ್ಲಿಷ್ ಸ್ಕೂಲ್' ಸ್ಥಾಪಿಸಿದ ಕೂಡಲೇ, ಇಲ್ಲಿಯೂ ಧಾರವಾಡದಲ್ಲಿ ಸನ್ ೧೮೮೨ರಲ್ಲಿ 'ನ್ಯೂ ಇಂಗ್ಲಿಷ್ ಸ್ಕೂಲ್' ಪ್ರಾರಂಭವಾಯಿತು. ಇದೇ ಮುಂದೆ ಸನ್ ೧೮೮೭ರಲ್ಲಿ ವಿಕ್ಟೋರಿಯಾ ಹಾಯ್‌ಸ್ಕೂಲ್ ಎಂದಾಯಿತು. ಸದ್ಯ ಇದು ವಿದ್ಯಾರಣ್ಯ ಹಾಯ್‌ಸ್ಕೂಲ್ ಆಗಿದೆ. ಪುಣೆಯಲ್ಲಿ 'ಕೇಸರಿ' ಪತ್ರಿಕೆ ಪ್ರಾರಂಭವಾದ ಕೂಡಲೇ ಧಾರವಾಡದಲ್ಲಿ ಸಿಂಹದ ಮರಿ 'ಭಾವಾ' ಮರಾಠಿ ಪತ್ರಿಕೆ ಪ್ರಾರಂಭವಾಯಿತು. ಹಾಗೆಯೇ, ಪುಣೆ–ಮುಂಬಯಿಯಲ್ಲಿ ವರ್ತಮಾನ ಪತ್ರಗಳು ಪ್ರಾರಂಭವಾದ ಕೂಡಲೇ, ಧಾರವಾಡದಲ್ಲಿಯೂ ಸನ್ ೧೮೭೩ರ ಸುಮಾರಿಗೆ 'ಧಾರವಾಡ ವೃತ್ತ' ಎಂಬ ಪತ್ರಿಕೆ ಪ್ರಾರಂಭವಾಯಿತು. ಇದನ್ನು ಪ್ರಾರಂಭಿಸಿದವರು ಅಂತಾಜಿ ರಾಮಚಂದ್ರ ಜೋಗಳೆಕರ ಎಂಬವರು (ಇವರು ಮುಂದೆ ರಾವ್ ಸಾಹೇಬ ಪದವಿಯನ್ನು ಪಡೆದರು). ಈ ಧಾರವಾಡ ವೃತ್ತ ಪತ್ರಿಕೆ ಮರಾಠಿ ಭಾಷೆಯಲ್ಲಿತ್ತು. ಶುದ್ಧ ಕನ್ನಡವಾದ ಧಾರವಾಡದಲ್ಲಿ ಮರಾಠಿ ಧಾರವಾಡ ವೃತ್ತ ಪತ್ರಿಕೆ ಪ್ರಾರಂಭವಾದದ್ದು ಇಲ್ಲಿಯ ಜನಕ್ಕೆ ಸರಿಬರಲಿಲ್ಲ. ಇದಕ್ಕೆ ವಿರೋಧ ವ್ಯಕ್ತವಾಯಿತು. ಇದನ್ನು ತಿಳಿದ ಶ್ರೀ ಜೋಗಳೆಕರ ಅವರು ಮುಂದೆ ಐದಾರು ತಿಂಗಳಲ್ಲಿಯೇ ಇಲ್ಲಿಯ ಹುಚ್ಚಯ್ಯ ಸಂಗಯ್ಯ ವಿಭೂತಿ ಎಂಬ ನುರಿತ ಕನ್ನಡ ಬರಹಗಾರರನ್ನು ಮುಂದೆ ಮಾಡಿ 'ಚಂದ್ರೋದಯ' ಎಂಬ ವಾರಪತ್ರಿಕೆಯನ್ನು ಕಲ್ಲಿನ ಮುದ್ರಣಾಲಯವನ್ನಿಟ್ಟು ಹೊರಡಿಸತೊಡಗಿದರು" (ಹೊನ್ನಪುರ, ಸಂ: ಡಾ. ಹೇಮಾ ಪಟ್ಟಣಶೆಟ್ಟಿ, ಪು. ೯೦–೯೧).

* * * *

ಎರಡನೆ ಮಹಾಯುದ್ಧ ಪ್ರಾರಂಭವಾದಾಗ, ಸರ್ಕಾರ ಯುದ್ಧದಲ್ಲಿ ಭಾರತವನ್ನು ಪ್ರವೇಶಗೊಳಿಸಿದುದನ್ನು ಪ್ರತಿಭಟಿಸಿ, ಯುದ್ಧ ವಿರೋಧಿ ವ್ಯಕ್ತಿಸತ್ಯಾಗ್ರಹವನ್ನು ಗಾಂಧೀಜಿಯ ಮುಖಂಡತ್ವದಲ್ಲಿ ಕಾಂಗ್ರೆಸ್ ಆರಂಭಿಸಿತು. ಅದನ್ನು ಪ್ರಾರಂಭಿಸುವವರು ಆದರ್ಶ ಸತ್ಯಾಗ್ರಹಿಯಾಗಿರಬೇಕಾಗಿತ್ತು. ಅಹಿಂಸೆ, ಅಸ್ಪೃಶ್ಯತಾ ವಿರೋಧ, ಪಾನ ನಿರೋಧ, ಜಾತಿಭೇದ ವಿರೋಧಿ ಆಗಿರಬೇಕಾಗಿತ್ತು. ಮೊದಲ ಸತ್ಯಾಗ್ರಹಿಯನ್ನು ಗಾಂಧಿಜಿಯೇ ಆರಿಸಿದರು. ಅವರು ವಿನೋಬಾ ಭಾವೆ. ಪಂಡಿತ ಜವಾಹರ ಲಾಲ್‌ರು ಎರಡನೆ ಸತ್ಯಾಗ್ರಹಿ. ಸರ್ಕಾರ ಅವರಿಗೆ ನಾಲ್ಕು ವರುಷ ಕಠಿಣ ಶಿಕ್ಷೆ ವಿಧಿಸಿತು. ಈ ವ್ಯಕ್ತಿ ಸತ್ಯಾಗ್ರಹದಲ್ಲಿ ಪ್ರತಿ

ಪ್ರಾಂತದಲ್ಲಿಯೂ ಸಾವಿರಾರು ಜನ ಆರಿಸಿದ ವ್ಯಕ್ತಿಗಳೇ ಸೆರೆಯಾದರು. ಕರ್ನಾಟಕದಲ್ಲಿಯೂ ಎರಡು ಸಾವಿರ ಸ್ತ್ರೀ ಪುರುಷರು ಬಂಧಿತರಾದರು. ಕ್ವಿಟ್ ಇಂಡಿಯಾ ಚಳುವಳಿ ಪ್ರಾರಂಭವಾಗದಿದ್ದರೆ, ಯುದ್ಧ ನಡೆದಷ್ಟು ದಿನವೂ ಆ ಚಳುವಳಿಯೂ ನಡೆಯುತ್ತಿದ್ದಿತೇನೋ. ಉಪ್ಪಿನ ಸತ್ಯಾಗ್ರಹ ಮತ್ತು ಕರನಿರಾಕರಣೆಯ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ೮೦೦ ಜನ ಸತ್ಯಾಗ್ರಹಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ೪೫೦, ಧಾರವಾಡ ಜಿಲ್ಲೆಯಲ್ಲಿ ೨೦೦, ದಕ್ಷಿಣ ಕನ್ನಡದಲ್ಲಿ ೧೬೦, ಬಿಜಾಪುರ ಜಿಲ್ಲೆಯಲ್ಲಿ ೧೬೦, ಕೊಡಗಿನಲ್ಲಿ ೪೦ ಮಂದಿ ಸೆರೆ ಸೇರಿದರು. ಬೆಳ್ಳಪ್ಪ, ಕುರುಬಯ್ಯ, ಆರ್. ಕೃಷ್ಣಯ್ಯ, ಪೂಣಚ್ಚ ಮುಂತಾದವರು ಸೆರೆಯಾದರು. ಸರ್ಕಾರ ಕೊಡುಗು ಪತ್ರಿಕೆಯ ಪ್ರಕಟಣೆಯನ್ನು ನಿಷೇಧಿಸಿತು, ಹಳೆ ಮೈಸೂರಿನಲ್ಲಿ ವೆಂಕಟಕೃಷ್ಣಯ್ಯ, ಭಾಷ್ಯಂ ಇವರಿಂದ ಪ್ರೇರಿತರಾಗಿ ಆನೇಕರು ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಅರ್ಕಲಗೂಡು ವೆಂಕಟರಾಮಯ್ಯ, ಟಿ. ಸದಾಶಿವಂ ಮುಂತಾದವರು ತಮಿಳುನಾಡಿನ ವೇದಾರಣ್ಯಂ ಸತ್ಯಾಗ್ರಹದಲ್ಲಿ ಸಹ ಭಾಗವಹಿಸಿದರು. ಅತ್ಯಂತ ಯಶಸ್ವಿಯಾಗಿ ಸರ್ದಾರ್ ವೀರಣ್ಣಗೌಡ ಪಾಟೀಲರ ನೇತೃತ್ವದಲ್ಲಿ ನಡೆಯಿತು. ೧೯೩೦–೩೧ರ ಸತ್ಯಾಗ್ರಹದಲ್ಲಿ ಎರಡು ಸಾವಿರಕ್ಕಿಂತ ಹೆಚ್ಚು ಮಂದಿ ಸತ್ಯಾಗ್ರಹಿಗಳು ಸೆರೆವಾಸ ಅನುಭವಿಸಿದರು. ಸತ್ಯಾಗ್ರಹದ ಇತಿಹಾಸದಲ್ಲಿ ಕರ್ನಾಟಕಕ್ಕೆ ಸುವರ್ಣಕಲಶವಾದ ಮತ್ತೊಂದು ಸತ್ಯಾಗ್ರಹವೆಂದರೆ ಅಂಕೋಲ, ಸಿದ್ಧಾಪುರ ಮುಂತಾದ ತಾಲೂಕುಗಳಲ್ಲಿ ನಡೆದ ಸತ್ಯಾಗ್ರಹ. ಕರನಿರಾಕರಣೆ ಚಳುವಳಿ, ಉಪ್ಪಿನ ಸತ್ಯಾಗ್ರಹ ಜಯಪ್ರದವಾಗಿ ಮುಗಿದುದರಿಂದ ಜನತೆಗೆ ಸವಿನಯ ಕಾಯಿದೆಭಂಗದ ಶಿಸ್ತು, ಸಂಯಮ, ಅಹಿಂಸೆ, ತ್ಯಾಗ ಇವೆಲ್ಲ ಅಭ್ಯಾಸವಾಗಿದ್ದುವು. ಕರನಿರಾಕರಣ ಚಳುವಳಿಯನ್ನು ಅವರು ಪ್ರಾರಂಭಿಸಿದರು. ಆಯಾ ತಾಲೂಕಿನ ಜನತೆಯ ಜೊತೆಗೆ ಮೈಸೂರಿನ ಸರ್ದಾರ್ ಕೆ. ಎ. ವೆಂಕಟ ರಾಜಯ್ಯ (ದಂಪತಿಗಳು) ಎಂ.ಎನ್. ಜೋಯಿಸ್ (ದಂಪತಿಗಳು) ಪಾರ್ಥನಾರಾಯಣ ಪಂಡಿತರು ಎಲ್ಲ ಸೇರಿದರು. ಕರ ನಿರಾಕರಣೆ ಎಂದರೆ ಸರಕಾರಕ್ಕೆ ಯಾವಾಗಲೂ ಗಾಬರಿ. ಎಲ್ಲೆಡೆಯೂ ಬಂಧನ, ನಿಷೇಧಾಜ್ಞೆ, ಬರದೋಲಿಯನ್ನು ಬಿಟ್ಟರೆ, ಭಾರತದಲ್ಲಿ ಮತ್ತಾವ ಕಡೆಯೂ ಅಂಕೋಲ, ಸಿದ್ಧಾಪುರ ಮುಂತಾದ ತಾಲೂಕುಗಳಲ್ಲಿ ನಡೆದಂತೆ ಕರನಿರಾಕರಣ ಚಳುವಳಿ ನಡೆಯಲೇ ಇಲ್ಲ.

* * * *



ಸ್ವಾತಂತ್ರ್ಯ ಚಳವಳಿಯ ಕೊನೆಯ ಹಂತದ ೧೯೪೨ರಲ್ಲಿ ನಡೆದ ಭಾರತವನ್ನು ಬಿಟ್ಟು ತೊಲಗಿ ಚಳವಳಿ, ೧೯೩೯ ಸಪ್ಟೆಂಬರ್ ತಿಂಗಳಲ್ಲಿ ಪ್ರಾರಂಭವಾದ ಎರಡನೆ ಜಾಗತಿಕ ಮಹಾಯುದ್ಧ, ಭಾರತದ ಸ್ವಾತಂತ್ರ್ಯ ಚಳವಳಿಯ ಹಿನ್ನೆಲೆಯಲ್ಲಿ ಮುಖ್ಯವಾದುದು. ಬ್ರಿಟಿಷರು ಕಾಂಗ್ರೆಸ್ಸಿನ ಜೊತೆ ಸಖ್ಯ ಬೆಳೆಸಿಕೊಳ್ಳುವುದು ಅನಿವಾರ್ಯವಾಯಿತು. ಈ ಉದ್ದೇಶದಿಂದಲೇ ಬ್ರಿಟಿಷ್ ಸರಕಾರವು ಸರ್ ಕ್ರಾಫರ್ಡ್ ಕ್ರೀಪ್ಸನ ನೇತೃತ್ವದಲ್ಲಿ ಭಾರತಕ್ಕೆ ನಿಯೋಗವೊಂದನ್ನು ಕಳುಹಿಸಿತು. ಆದರೆ ಕ್ರೀಪ್ಸನ ಸಂಧಾನ ಯಶಸ್ವಿಯಾಗಲಿಲ್ಲ. ಇದರಿಂದ ಅಸಮಾಧಾನಗೊಂಡ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಜುಲೈ ೧೪, ೧೯೪೨ರಂದು ಸಭೆ ಸೇರಿ ಬ್ರಿಟಿಷರು ಭಾರತೀಯರ ಕೋರಿಕೆಯನ್ನು ತಿರಸ್ಕರಿಸಿದರೆ ಮುಂದೆ ತೀವ್ರ ಹೋರಾಟ ಮಾಡಬೇಕೆಂಬ ತೀರ್ಮಾನವನ್ನು ತೆಗೆದುಕೊಂಡಿತು. ನಿರೀಕ್ಷಿಸಿದಂತೆ ಭಾರತೀಯರ ಕೋರಿಕೆಗಳು ಈಡೇರದಿದ್ದುದರ ಪರಿಣಾಮವಾಗಿ ಮತ್ತೆ ಆಗಸ್ಟ್ ತಿಂಗಳ ೭ ಮತ್ತು ೮ ರಂದು ಸಭೆ ಸೇರಿ ಬ್ರಿಟಿಷರೆ ಭಾರತ ಬಿಟ್ಟು ತೊಲಗಿ ಚಳವಳಿಯನ್ನು ಹಮ್ಮಿಕೊಳ್ಳಬೇಕೆಂಬ ತೀರ್ಮಾನವನ್ನು ಕಾಂಗ್ರೇಸ್ ತೆಗೆದುಕೊಂಡಿತು. ಗಾಂಧೀಜಿಯವರ ಈ ಕ್ರಾಂತಿಕಾರಕ ಘೋಷಣೆ ಜನರ ಘೋಷಣೆಯಾಯಿತು. ಆಗಸ್ಟ್ ೯, ೧೯೪೨ರಂದು ಈ ಚಳವಳಿ ಪ್ರಾರಂಭವಾಗಿ ದೇಶದ ಕಾಂಗ್ರೆಸ್ ನೇತಾರರೆಲ್ಲಾ ಸೆರೆಮನೆಗಳನ್ನು ಸೇರಿದರು.

ದೇಶದ ಬಹುತೇಕ ಎಲ್ಲ ಪ್ರಾಂತ್ಯಗಳಲ್ಲಿ ಈ ಚಳವಳಿ ತೀವ್ರವಾಗಿ ನಡೆಯಿತು. ಸುಮಾರು ೩೧೯ ರೈಲ್ವೆ ನಿಲ್ದಾಣಗಳು ಅಗ್ನಿಗಾಹುತಿಯಾದವು. ೯೪೫ ಅಂಚೆ ಕಚೇರಿಗಳು ಜನರ ದಾಳಿಗೊಳಗಾದವು. ಟೆಲಿಗ್ರಾಫ್ ತಂತಿಗಳನ್ನ ಕತ್ತರಿಸಿಹಾಕಿದರು. ಈ ಚಳವಳಿಯಲ್ಲಿ ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ಸ್ತ್ರೀಯರು, ವಕೀಲರೂ ಮುಂತಾದ ಎಲ್ಲ ಸಾಮಾಜಿಕ ವರ್ಗಗಳು ಭಾಗವಹಿಸಿದ್ದವು.

ಕರ್ನಾಟಕದಲ್ಲೂ ಈ ಚಳವಳಿ ತೀವ್ರವಾಗಿ ನಡೆಯಿತು. ವಿದ್ಯಾರ್ಥಿಗಳು ಸಾವಿರಾರು ಸಂಖ್ಯೆಯಲ್ಲಿ ಶಾಲಾ–ಕಾಲೇಜುಗಳನ್ನು ತೊರೆದರು. ಅನೇಕ ಸರಕಾರಿ ನೌಕರರು ತಮ್ಮ ಹುದ್ದೆಗಳಿಗೆ ರಾಜೀನಾಮೆ ಕೊಟ್ಟು ಹೊರಬಂದರು. ಭಾರೀ ಮೆರವಣಿಗೆಗಳು ನಡೆದವು. ಮುಂಬಯಿ ಹೈಕೋರ್ಟಿನ ಪ್ಲೀಡರ್

ಆಗಿದ್ದ ಶ್ರೀ ಆರ್. ಎ. ಜಾಗೀರದಾರರು ರಾಜೀನಾಮೆ ಕೊಟ್ಟು ಹೊರಬಂದರು. ಕರ್ನಾಟಕದ ೨೮ ರೈಲ್ವೆ ನಿಲ್ದಾಣಗಳು ಬೆಂಕಿಗಾಹುತಿಯಾದವು. ಅನೇಕ ಸಂಪರ್ಕ ಸೇತುವೆಗಳನ್ನು ಕತ್ತರಿಸಿಹಾಕಿದರು. ಅಧಿಕಾರಿಗಳ ವಿಶ್ರಾಂತಿ ಗೃಹ ಹಾಗೂ ತಂಗುದಾಣಗಳನ್ನು ಧ್ವಂಸ ಮಾಡಿದರು. ಕೋರ್ಟುಗಳಿಗೆ ಹೋಗಿ ತಾವೇ ನ್ಯಾಯಾಧೀಶರ ಸ್ಥಾನದಲ್ಲಿ ಕುಳಿತು ಅಣಕು ಆಟವಾಡಿದ ಅನೇಕ ನಿದರ್ಶನಗಳು ದಾಖಲಾಗಿವೆ. ಅನೇಕ ಶಾಲಾ ಹುಡುಗಿಯರು ಇಂತಹ ಕೃತ್ಯಗಳಲ್ಲಿ ಭಾಗವಹಿಸಿದ್ದು ಒಂದು ವಿಶೇಷ.

ಧಾರವಾಡ ಜಿಲ್ಲೆಯಲ್ಲಿ ಬಿಂದಾಚಾರ್ಯ ಬುರ್ಲಿ, ಕೆ. ಎಫ್. ಪಾಟೀಲ್, ಶಿವರಾಯಪ್ಪ ಮನ್ನವರ, ಶಿವಶಂಕರಪ್ಪ ದೇವಪುರ, ಕರಿಯಪ್ಪ ಯರೇಸೀಮೆ, ತಿಮ್ಮನಗೌಡ ಮೆಣಶಿನಹಾಳ, ಮಹದೇವಪ್ಪ ಮೈಲಾರ, ಗೋವಿಂದಾಚಾರ್ಯ ಅಗ್ನಿಹೋತ್ರಿ, ಶಿವಪ್ಪ ನೇಸ್ವಿ, ಮೂಶೆಪ್ಪ ಯಾಬಣ್ಣವರ, ನಾರಾಯಣ ಹೊಸಕೇರಿ, ನರಸಿಂಹ ದಾಬಡೆ ಇನ್ನೂ ಮುಂತಾದವರ ನೇತೃತ್ವದಲ್ಲಿ ಈ ಚಳವಳಿ ನಡೆಯಿತು.

೧೯೪೨ ರಲ್ಲಿ 'ಕ್ವಿಟ್ ಇಂಡಿಯಾ' ಚಳುವಳಿ ನಡೆದ ಸಂದರ್ಭದಲ್ಲಿ ಮೈಸೂರು ಸಕ್ರಿಯವಾಗಿ ಭಾಗವಹಿಸಿತು. ಎಲ್ಲಾ ಪ್ರಮುಖ ಮುಖಂಡರನ್ನು ಬಂಧಿಸಲಾಯಿತು. ಇಸೂರು, ದಾವಣಗೆರೆ, ಶ್ರವಣಬೆಳಗೊಳ, ಬೆಳಗಾವಿ, ಧಾರವಾಡ ಮತ್ತು ಬಿಜಾಪುರಗಳಲ್ಲಿ ಪೊಲೀಸರು ಗೋಲಿಬಾರ್ ನಡೆಸಿದರು. ಎಲ್ಲಾ ಸ್ಥಳಗಳಲ್ಲೂ ಚಳುವಳಿ ನಡೆಯಿತು. ಒಂದೂವರೆ ಲಕ್ಷಕ್ಕೂ ಹೆಚ್ಚು ಮಂದಿಯನ್ನು ಬಂಧಿಸಲಾಯಿತು. ಹೆಂಗಸರು ಮತ್ತು ಮಕ್ಕಳೂ ಸಹ ಭಾಗವಹಿಸಿದರು. ಶಾಲಾ ಕಾಲೇಜುಗಳನ್ನು ಮುಚ್ಚಲಾಯಿತು. ವಿದ್ಯಾರ್ಥಿಗಳು ಪ್ರಮುಖ ಪಾತ್ರ ವಹಿಸಿದರು. ಲಾಟಿಚಾರ್ಜು ಮತ್ತು ಗೋಲಿಬಾರುಗಳು ಅನೇಕ ಸ್ಥಳಗಳಲ್ಲಿ ನಡೆದವು. ನಾಯಕರ ಆಸ್ತಿ ಪಾಸ್ತಿಗಳನ್ನು ಮುಟ್ಟುಗೋಲು ಹಾಕಲಾಯಿತು. ಹಳ್ಳಿ, ನಗರಗಳ ಮೇಲೆ ಸಾಮೂಹಿಕ ದಂಡವನ್ನು ಹಾಕಲಾಯಿತು. ಈ ರೀತಿಯಾಗಿ ೧೯೪೨ ನೆಯ ವರ್ಷ ಕರ್ನಾಟಕದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಪ್ರಮುಖ ಘಟ್ಟವೆನ್ನಬಹುದು. ಸರ್ಕಾರ ಕಾಂಗ್ರೆಸ್ ಪಕ್ಷವನ್ನು ಬಾಹಿರವೆಂದು ಪ್ರಕಟಿಸಿದಾಗ ಚಳುವಳಿ ಮತ್ತಷ್ಟು ಹೆಚ್ಚಿತು. ನಿಷೇಧಾಜ್ಞೆಯನ್ನು ಉಲ್ಲಂಘಿಸಿದ ಜನರು, ಟಿಕೆಟಿಲ್ಲದೆ ರೈಲಿನಲ್ಲಿ ಪ್ರಯಾಣ



ಮಾಡುವುದು, ಟೆಲಿಗ್ರಾಫ್ ತಂತಿಯನ್ನು ಕತ್ತರಿಸುವುದು, ಆಸ್ತಿಪಾಸ್ತಿಗೆ ಹಾನಿಯುಂಟು ಮಾಡುವುದು ಇವೇ ಮೊದಲಾದ ಕಾರ್ಯಗಳಲ್ಲಿ ತೊಡಗಿದರು. ಈಚಲು ಮರಗಳನ್ನು ಕಡಿದು ಹಾಕಿ, ಹೆಂಡದ ಅಂಗಡಿಗಳನ್ನು ಲೂಟಿ ಮಾಡಲಾಯಿತು. ಸರ್ಕಾರ ಚಳುವಳಿಯನ್ನು ಉಗ್ರವಾಗಿ ಹತ್ತಿಕ್ಕಲು ಪ್ರಯತ್ನಿಸಿತು. ಸಾವಿರಾರು ಜನರನ್ನು ಬಂಧಿಸಿ ಸೆರೆಮನೆಗೆ ತಳ್ಳಲಾಯಿತು. ೧೯೪೨ರಲ್ಲಿ. ಅದು ಕ್ವಿಟ್ ಇಂಡಿಯಾ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಆಗಸ್ಟ್ ೧೯ ರಂದು ಗಾಂಧೀಜಿಯವರ ಬಂಧನವಾದಾಗ ಈ ಚಳವಳಿ ಉಗ್ರರೂಪವನ್ನು ತಾಳಿತು. ಬೆಳಗಾವಿ, ಧಾರವಾಡ, ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಸರಕಾರದ ಆಸ್ತಿಪಾಸ್ತಿಗಳನ್ನು ಚಳವಳಿಕಾರರು ನಾಶ ಮಾಡಿದರು. ರೈಲ್ವೆ ಹಳಿ ಕಿತ್ತರು. ಟೆಲಿಗ್ರಾಫ್ ತಂತಿ ಕಿತ್ತರು. ಸರಕಾರಿ ಕಟ್ಟಡಗಳನ್ನು ಸುಟ್ಟರು. ಮದ್ಯದ ಅಂಗಡಿಗಳ ಎದುರಿಗೆ ಪಿಕೆಟಿಂಗ್ ನಡೆಯಿತು. ಬೆಂಗಳೂರು, ಭದ್ರಾವತಿ, ಕೋಲಾರ, ದಾವಣಗೆರೆಗಳಲ್ಲಿ ಕಾರ್ಮಿಕರು ಕಾಂಗ್ರೆಸ್ ಧುರೀಣರ ದಸ್ತಗಿರಿಯನ್ನು ಪ್ರತಿಭಟಿಸಿ, ಕಾರ್ಖಾನೆಗಳನ್ನು ಬಿಟ್ಟು ಹೊರಗೆ ಬಂದರು. ವಿದ್ಯಾರ್ಥಿಗಳು ಶಾಲೆ ಕಾಲೇಜುಗಳನ್ನು ಬಿಟ್ಟು ಹೊರಬಂದರು. ಬೆಂಗಳೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಚಳವಳಿಯನ್ನು ಹತ್ತಿಕ್ಕಲು ಬ್ರಿಟಿಷ್ ಸೈನ್ಯ ಬರಬೇಕಾಯಿತು.

ಡಾ. ಕಾಮತ್ ಹೀಗೆ ಹೇಳುತ್ತಾರೆ. "ನಿಸ್ಸಂಶಯವಾಗಿಯೂ ಕರ್ನಾಟಕದಲ್ಲಿ ನಡೆದ ಕ್ವಿಟ್ ಇಂಡಿಯಾ ಚಳವಳಿಯು ಧೈರ್ಯ, ತ್ಯಾಗಗಳ ರಮ್ಯ ಕಥಾನಕ. ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ಅದಕ್ಕೂ ಹೆಚ್ಚಾಗಿ ಗ್ರಾಮೀಣ ಜನತೆ, ಬಹುಪಾಲಿನ ರೈತರು ತಮ್ಮ ಸ್ವಾತಂತ್ರ್ಯದ ಬಗೆಗಿನ ಪ್ರೇಮವನ್ನೂ, ಅದಕ್ಕೂ ಹೆಚ್ಚಾಗಿ ಒಂದು ಧ್ಯೇಯಕ್ಕಾಗಿ ಹೋರಾಡುವ ವೀರವೃತ್ತಿಯನ್ನೂ ಚೆನ್ನಾಗಿ ಪ್ರದರ್ಶಿಸಿದರು. ಇದೊಂದು ನಿಸ್ಸಂಶಯವಾಗಿಯೂ ಅಸಮ ಹೋರಾಟ."

೧೯೪೨ರ ಚಳುವಳಿ ಭಾರತದ ಮಟ್ಟಿಗೆ ನಿರ್ಣಾಯಕವಾದ ಪಾತ್ರವನ್ನು ವಹಿಸಿತು. ಕರ್ಮವೀರ, ಸಂಯುಕ್ತ ಕರ್ನಾಟಕ, ಚಂದ್ರೋದಯ ಮೊದಲಾದ ಪತ್ರಿಕೆಗಳು, ಗದಿಗೆಯ್ಯ ಹೊನ್ನಾಪೂರಮಠ, ಆಲೂರ ವೆಂಕಟರಾಯರು, ದ. ರಾ. ಬೇಂದ್ರೆ, ರಂಗನಾಥ ದಿವಾಕರ ಮೊದಲಾದ ಸಾಹಿತಿ ವಿದ್ವಾಂಸರಿಂದ ಧಾರವಾಡ ಹೋರಾಟಕ್ಕೆ ಒಂದು ಬಲ ಬಂದಂತಾಗಿತ್ತು.

ಈ ಭಾಗದ ಹೋರಾಟಗಾರರಲ್ಲಿ ಸರದಾರ ವೀರನಗೌಡರ ಪಾತ್ರ ಅವಿಸ್ಮರಣೀಯವಾದುದು. ಅವರ ಮಗಳು ಲೀಲಾವತಿ ಗಾಂಧಿ ಆಶ್ರಮದಲ್ಲಿ ಬೆಳೆದವರು. ವೆಂಕಟೇಶ ಮಾಗಡಿ ಅವರನ್ನು ಪ್ರೀತಿಸಿದರು. ಗಾಂಧೀಜಿಯವರ ಆಶಯದಂತೆ ಜಾತ್ಯತೀತ ನಿಲುವಿನಿಂದ ಲೀಲಾವತಿ ಮತ್ತು ವೆಂಕಟೇಶ ಮಾಗಡಿ ಅವರು ವಿವಾಹವಾದರು. ಸರದಾರ ವೀರನಗೌಡರು ತಮ್ಮ ಹೋರಾಟದ ಕೆಚ್ಚನ್ನು ಮಗಳು ಮತ್ತು ಅಳಿಯನಿಗೆ ಧಾರೆ ಎರೆದು, ತಾವು ಕೆ.ಎಲ್.ಇ.ಯಂತಹ ಮಹೋನ್ನತ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ಪರಿಶ್ರಮಿಸಿದರು.

ಇದಿಷ್ಟು ಬೆಂಗೇರಿಯನ್ನು ಕೇಂದ್ರವಾಗಿಟ್ಟುಕೊಂಡು ಹುಬ್ಬಳ್ಳಿ–ಧಾರವಾಡ ಪ್ರದೇಶದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಕಥನ.

❑

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |

| | | | |
|---|---|---|---|
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |



| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ<br>ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |

| | | | |
|---|---|---|---|
| ೪೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೪೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೪೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೪೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೪೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೪೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೪೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೫೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೫೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೫೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೫೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೫೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೫೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೫೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೫೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೫೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೫೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |



| | | | |
|---|---|---|---|
| ೬೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೬೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೬೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೬೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೬೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖